(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, "ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಭಾರತದ ರಾಷ್ಟ್ರಾಧ್ಯಕ್ಷರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಂತೆ ಮತ್ತು ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಎರಡನೇ ಬಾರಿಗೆ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಭಾರತದ ರಾಷ್ಟ್ರಾಧ್ಯಕ್ಷರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಂತೆ ಮತ್ತು ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಎರಡನೇ ಬಾರಿಗೆ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

***ಅನುಬಂಧ-1**

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕ 2006

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಬಗರ್‌ಹುಕುಂ ಅವಧಿಯನ್ನು ವಿಸ್ತರಣೆ ಮಾಡಬೇಕಾಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ನಾನು ನಿನ್ನೆ ತಾನೇ ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ ಲಾಭದಾಯಕ ಹುದ್ದೆಯ ವಿಚಾರದಲ್ಲಿ ರಾಜ್ಯಪಾಲರು ಕಳುಹಿಸಿಕೊಟ್ಟಿರುವಂತಹ ಸಂದೇಶದ ಮಸೂದೆಯನ್ನು ನಾವು ನಾಳೆ ಚರ್ಚೆ ಮಾಡಬೇಕು ಎಂದು ನಾನು ನಿನ್ನೆ ಹೇಳಿದ್ದೇನೆ. ತಮ್ಮ ಒಪ್ಪಿಗೆಯನ್ನು ಪಡೆದುಕೊಂಡಿದ್ದೇನೆ, ಇಡೀ ಸದನವು ಒಪ್ಪಿಗೆಯನ್ನು ಕೊಟ್ಟಿದೆ. ನಾಳೆ ಇದನ್ನು ತೆಗೆದುಕೊಳ್ಳಬೇಕೆಂದು ಒಪ್ಪಿಗೆಯನ್ನು ಕೊಟ್ಟಿದೆ, ಆಗ ತಾವು ಸದನದಲ್ಲಿ ಇದ್ದಿರಲ್ಲಾ,

---

*ಅನುಬಂಧ-1 ಅಂಗೀಕರಿಸಲ್ಪಟ್ಟ ಮಸೂದೆಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಶ್ರೀ ಧರ್ಮಸಿಂಗ್: ಬರಗಾಲದ ಬಗ್ಗೆ ಚರ್ಚೆ ಆಗಬೇಕು, ತದನಂತರ ಬಿಲ್ ಎಂದು ಹೇಳಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್: ಬರಗಾಲದ ಬಗ್ಗೆ ಮತ್ತು ಪ್ರವಾಹದ ಬಗ್ಗೆ ಚರ್ಚೆ ಆಗಬೇಕು, ನಿನ್ನೆ 6 ಗಂಟೆಗೆ ಅಧಿವೇಶನ ಮುಗಿದುಹೋಯಿತು. ಇವತ್ತು ಮಸೂದೆಗಳ ಬಗ್ಗೆ ಚರ್ಚೆಯನ್ನು ಮಾಡಲು ನಮಗೆ ಅವಕಾಶವನ್ನು ಕೊಡಬೇಕು. 28ನೇ ತಾರೀಖು ಮಾನ್ಯ ರಾಜ್ಯಪಾಲರು ಭಾಷಣವನ್ನು ದಯಪಾಲಿಸಿದ ನಂತರ, ಈ ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿನ್ನೆ ನಿರ್ಧಾರವಾಯಿತು. ಇಲ್ಲಿ ಪಾಸ್ ಆದನಂತರ ಕೌನ್ಸಿಲ್‌ಗೆ ತೆಗೆದುಕೊಂಡು ಹೋಗಬೇಕಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್: ಬರಗಾಲದ ಬಗ್ಗೆ ಚರ್ಚೆಯಾಗುವಾಗ ಮಧ್ಯದಲ್ಲಿ ಮಾನ್ಯ ಯಡಿಯೂರಪ್ಪನವರು ಬಿಲ್ ಅನ್ನು ತಂದರು. ಈಗಲೂ ಬಿಲ್ ಅನ್ನು ತಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್: ಹಾಗಾದರೆ ತಾವು ಹೇಳಿ, ನಾಳೆ ಇದನ್ನು ಮತ್ತೆ ಕೌನ್ಸಿಲ್‌ಗೆ ಕಳುಹಿಸಿಕೊಡಬೇಕಾಗುತ್ತದೆ. ಅನೇಕ ಸದಸ್ಯರು ನಾಳೆ ಮಧ್ಯಾಹ್ನವೇ ಅಧಿವೇಶನವನ್ನು ಮುಗಿಸಬೇಕೆಂದು ಹೇಳುತ್ತಿದ್ದಾರೆ. ಇವತ್ತು ಬಿಲ್ ಪಾಸ್ ಮಾಡಿದರೆ, ಇದು ಕೌನ್ಸಿಲ್‌ನಲ್ಲಿ ಅಕಸ್ಮಾತ್ ತಿರಸ್ಕಾರ ಮಾಡಿದರೆ, ಮತ್ತೆ ಈ ಬಿಲ್ ಇಲ್ಲಿಗೆ ಬರಬೇಕಾಗುತ್ತದೆ. ಆ ಕಾರಣಕ್ಕಾಗಿ ಬರಗಾಲದ ಬಗ್ಗೆ ಚರ್ಚೆ......

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಯಡಿಯೂರಪ್ಪನವರು ಬಿಲ್ ಅನ್ನು ತಂದರು. ರಾಷ್ಟ್ರಪತಿಯವರು ವಾಪಸ್ಸು ಕಳುಹಿಸಿದರು. ಅದರ ಬಗ್ಗೆ ತರಾತುರಿಯಲ್ಲಿ ಏನೂ ವಿಚಾರವಾಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವೇ ಇದನ್ನು ತಂದಿರುವುದು, ನಾನಲ್ಲ.

ಶ್ರೀ ಎನ್. ಧರ್ಮಸಿಂಗ್: ಎರಡನೆಯದಾಗಿ, office of profit ನಲ್ಲಿ ನಿಗಮ ಮಂಡಳಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮಾಡುವಂತಹ ಬಿಲ್; ಇಲ್ಲಿ ಮೊದಲು ಬರಗಾಲದ ಬಗ್ಗೆ ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆಯಾಗಿ, ಸಂಬಂಧಪಟ್ಟಂಥ ಮಂತ್ರಿಗಳು ಉತ್ತರವನ್ನು ಕೊಡಲಿ, ಇಲ್ಲ ನಿಮಗೆ ಬೇಕಿಲ್ಲವೆಂದರೆ ಬೇಡ. ನಿನ್ನೆ ದಿವಸ ಬರಗಾಲದ ಬಗ್ಗೆ ಚರ್ಚೆಯಾಗಲಿ, ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆಯಾಗಲಿ, ಎಂದು ಹೇಳಿದಿರಲ್ಲಾ........

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು, ಇದು ಆದರೆ, licence ಕೊಟ್ಟು ಈ ಪ್ರಕರಣಕ್ಕೆ

ಅನುಕೂಲವಾಗುತ್ತದೆ ಎಂದು ಹೇಳಿದರು. ಇದು ಹಿಂದಿನ ಸರ್ಕಾರದಲ್ಲಿಯೇ ತಂದಿರತಕ್ಕಂಥ ಮಸೂದೆ, ಈಗ ತಂದಿರತಕ್ಕಂಥಾದ್ದಲ್ಲ.

ಶ್ರೀ ಎನ್. ಧರಂಸಿಂಗ್: ಹಿಂದಿನ ಸರ್ಕಾರದಲ್ಲಿ ಅದನ್ನು ಒಪ್ಪಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಒಪ್ಪಲಿಲ್ಲವೆನ್ನುವುದು ಬೇರೆ ವಿಷಯ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೀವು Billಗಳನ್ನು ತೆಗೆದುಕೊಂಡು ಬಂದು, ನಮ್ಮನ್ನು ಇಲ್ಲಿ ಹಾಗೇ ಕೂರಿಸಿಬಿಟ್ಟರೆ ನಾವು ಹಾಗೆ ಹೋಗುವುದಕ್ಕಾಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್: ನಿನ್ನೆ ನಾವು ಏನು ಹೇಳಿದೆವು? ನೀವು ಏನೆಂದು ಒಪ್ಪಿಕೊಂಡಿರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಂತರ ನೀವು Billಅನ್ನು ಮಾಡಿಕೊಳ್ಳಿ. ನಾವು ಬೇಡವೆನ್ನುತ್ತೇವೆಯೇ?

ಶ್ರೀ ಎಂ.ಪಿ. ಪ್ರಕಾಶ್: ಈಗ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅದನ್ನು ನೀವು ಮಾಡಿಕೊಂಡರೆ ನಾವು ಏನು ಮಾಡುವುದು?

ಶ್ರೀ ಎನ್. ಧರಂಸಿಂಗ್: ಗಡಿಭಾಗದಲ್ಲಿ ನೀವು ಅಧಿವೇಶನವನ್ನು ಕರೆದಿರುವ ಉದ್ದೇಶವಿಷ್ಟೇ; ಅದು Billಗಳನ್ನು pass ಮಾಡಿಕೊಳ್ಳುವುದು.

ಶ್ರೀ ಎಂ.ಪಿ. ಪ್ರಕಾಶ್: ಆ ಚರ್ಚೆ ಮುಗಿದ ಮೇಲೆ ನೀವು ರಾತ್ರಿಯೂ ಕೂರುತ್ತೇವೆ ಎನ್ನುವುದಾದರೆ, ರಾತ್ರಿ 12 ಗಂಟೆಯಾದರೂ ನಾವು ಕೂರಲು ತಯಾರಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೀವು ಬರೀ ಬೆಂಗಳೂರಿನ ಸಲುವಾಗಿ ಈ ಅಧಿವೇಶನವನ್ನು ಕರೆದಿದ್ದೀರಿ ಎನ್ನುವುದಾದರೆ ಅದನ್ನೇ ಮಾಡಿಕೊಂಡು ಕೂರೋಣ. ಬೇರೆ ಯಾವುದನ್ನೂ ಮಾಡುವುದು ಬೇಡ.

ಶ್ರೀ ಎಂ.ಪಿ. ಪ್ರಕಾಶ್: ನಾವು ನಿನ್ನೆ ಮಾತನಾಡಿರತಕ್ಕಂಥ ಮಾತಿನ ಪ್ರಕಾರ ನಡೆದುಕೊಳ್ಳಬೇಕಲ್ಲವೇ? ನಿನ್ನೆ ಏನು ತೀರ್ಮಾನವಾಗಿತ್ತು? ಈ ಮಸೂದೆಯನ್ನು ಈ ದಿವಸ ಚರ್ಚೆ ಮಾಡುತ್ತೇವೆ ಎಂದು ಹೇಳಿದ್ದೆವು.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ಪಿ.ಪ್ರಕಾಶ್ ಸಾಹೇಬರು ಯಾವ ಒಂದು conclusion ಗೆ ಬಂದಿದ್ದಾರೆಂದರೆ, Office of Profit Bill ಅನ್ನು ನಾವು ತಂದೇ ತರುತ್ತೇವೆ, ನೀವು pass ಮಾಡುತ್ತೀರೋ, ಬಿಡುತ್ತೀರೋ

ಗೊತ್ತಿಲ್ಲ, ಆದರೆ ಅದನ್ನು ನಾನು ತರುವುದು ಮಾತ್ರ ನಿಶ್ಚಿತ ಎಂದು ಅವರು ನಿನ್ನೆಯೇ ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ನಾವು ಹಾಗೆ ಹೇಳಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗೆ ಹೇಳಲಿಲ್ಲವೆಂದರೆ ಹೀಗೆ ಹೇಳಿದಿರಿ. ಕೆ.ಹೆಚ್. ಪಾಟೀಲರು ಒಂದು ಕಥೆಯನ್ನು ಹೇಳುತ್ತಿದ್ದರು. ಏನೆಂದರೆ, ಒಂದು ಸಲ ಅವರ ಮನೆಯಲ್ಲಿ ಅವರ ಮಗ ತಂದೆಯನ್ನು ಕೇಳಿದನಂತೆ, ಅಪ್ಪಾ ಪಕ್ಕದ ಊರಿನಲ್ಲಿ ಜಾತ್ರೆ ಇದೆ, ಅದಕ್ಕೆ ನಾನು ಹೋಗಬೇಕಾಗಿದೆ, ನೀವು ಅವಕಾಶ ಮಾಡಿಕೊಡಿ ಎಂದು ಕೇಳಿದನಂತೆ. ಬೇಡಪ್ಪಾ, ಅಲ್ಲಿಗೆ ಹೋಗುವುದು ಬೇಡ, ಅಲ್ಲೆಲ್ಲಾ ಗಲಾಟೆಯಿದೆ, ತೊಂದರೆಯಿದೆ, ಹೋಗುವುದು ಬೇಡ ಎಂದರಂತೆ. ಆಮೇಲೆ, ಎರಡನೆಯ ಸಲ ಮಗ ಕೇಳಿದನಂತೆ, ನಮ್ಮ friends ಎಲ್ಲರೂ ಹೋಗುತ್ತಿದ್ದಾರೆ, ನಾನೂ ಹೋಗಬೇಕು ಎಂದನಂತೆ. ಅದಕ್ಕೆ ಅವರು, ಬೇಡಪ್ಪಾ, ಹೋಗುವುದು ಬೇಡ ಎಂದು ಹೇಳಿದೆನಲ್ಲಾ ಎಂದರಂತೆ. ಮೂರನೆಯ ಸಲ ಮಗ ಹೋಗಿ ಅವರಿಗೆ ಹೇಳಿದನಂತೆ, ಮತ್ತೇನು ಮಾಡುವುದಪ್ಪಾ, ಎಲ್ಲರೂ ಹೋಗುತ್ತಿದ್ದಾರೆ, ಈಗ ನೀನು ಬೇಡವೆಂದರೂ ಹೋಗುತ್ತೇನೆ, ಹೋಗು ಎಂದರೂ ಹೋಗುತ್ತೇನೆ, ಇದಕ್ಕೆ ಏನು ಹೇಳುತ್ತೀರೋ ಅದನ್ನು ಬೇಗನೆ ಹೇಳಿ ಎಂದನಂತೆ. ಹಾಗೆ,......

ಒಬ್ಬ ಮಾನ್ಯ ಸದಸ್ಯರು: ಹಾಗೆಲ್ಲಾ ತೋರಿಸಿಕೊಟ್ಟಿರುವುದು ನೀವೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹಾಗೆ ಮಾನ್ಯ ಪ್ರಕಾಶ್‌ರವರೂ ಸಹ, ನೀವು Bill ಅನ್ನು pass ಮಾಡಿದರೂ ಮಾಡಿಸಿಕೊಳ್ಳುತ್ತೇವೆ, ಮಾಡದಿದ್ದರೂ ಮಾಡಿಸಿಕೊಳ್ಳುತ್ತೇವೆ ಎಂದು ಅದನ್ನು pass ಮಾಡಿಸಿಕೊಳ್ಳಲು ಹೊರಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ತಾವು ಹೇಳಿದ ಕಥೆಯನ್ನು ನಾನು ಒಪ್ಪುತ್ತೇನೆ. ಈಗ ನಾನು ಮೊದಲನೇ ತರಹದಲ್ಲಿ ಬೇಡಿಕೆ ಇಟ್ಟಿದ್ದೇನೆ.

ಶ್ರೀ ಎನ್. ಧರಂಸಿಂಗ್: ರಾಜ್ಯ ಗಡಿ ಭಾಗದಲ್ಲಿರತಕ್ಕಂಥ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿದೆ. ಈ ಅಧಿವೇಶನದ ಮೂಲಕ ರಾಜ್ಯದ ಜನತೆಗೆ ಏನು ಸಂದೇಶವನ್ನು ಕೊಡುತ್ತೀರಿ? ಗಡಿ ಭಾಗದಲ್ಲಿರತಕ್ಕಂಥ ರೈತರ ಸಮಸ್ಯೆಗಳನ್ನು ಪರಿಹರಿಸುತ್ತೇವೆ, ಉತ್ತರ ಕರ್ನಾಟಕ........

ಒಬ್ಬ ಮಾನ್ಯ ಸದಸ್ಯರು: ಸಂದೇಶವನ್ನು ಈಗಾಗಲೇ ಕೊಟ್ಟಾಗಿದೆ.

Sri N. DHARM SINGH: Office of Profit Bill ಅನ್ನು ತಂದು ಇವತ್ತು ನೀವು ಏನು ಮಾಡುತ್ತಿದ್ದೀರಿ?

ಶ್ರೀ ಎಂ.ಪಿ. ಪ್ರಕಾಶ್: ಕಾರ್ಯಕಲಾಪಗಳ ಪಟ್ಟಿಯಲ್ಲಿ ಇದು ಸೇರಿದೆ. ಇದನ್ನು ನಾವು ಹೊಸದಾಗೇನೂ ತಂದಿಲ್ಲ. ಈ ವಿಷಯದ ಪ್ರಸ್ತಾಪ ಬಂದಾಗ ನಿನ್ನೆ ಕೂಡ ನಾನು, ರಾಜ್ಯಪಾಲರು ತಮ್ಮ ಭಾಷಣವನ್ನು ದಯಪಾಲಿಸಿದ ನಂತರ, ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿರುವ ಮಸೂದೆಗಳ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು ಎಂದು ವಿನಂತಿ ಮಾಡಿಕೊಂಡಾಗ, ಅದಕ್ಕೆ ತಾವು ದಯವಿಟ್ಟು ಒಪ್ಪಿದ್ದೀರಿ. ಅದಾದನಂತರ ಸಾಧ್ಯವಾದರೆ 29ನೇ ತಾರೀಖಿನಂದೂ ಸಹ ಕಾರ್ಯಕಲಾಪಗಳನ್ನು ಮಾಡಬೇಕು ಎನ್ನುವುದಕ್ಕೆ ತಾವು ಸದನದಲ್ಲಿ ಒಪ್ಪಿಗೆ ಕೊಟ್ಟಿದ್ದೀರಿ. ಈಗ ನಮಗಿರತಕ್ಕಂಥ ತೊಂದರೆಯೇನೆಂದರೆ, ಈ Bill ಇಲ್ಲಿ ಮಂಡನೆಯಾದ ಮೇಲೆ ನಾವು ಇದನ್ನು ವಿಧಾನ ಪರಿಷತ್ತಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಹಾಗಾಗಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ನಾನು ಜಾತ್ರೆಗೆ ಹೋಗುತ್ತಿದ್ದೇನೆ ಅವಕಾಶ ಕೊಡಿ ಎಂದು ನಾನು ಮೊದಲನೇ ಬಾರಿಗೆ ಕೇಳುತ್ತಿದ್ದೇನೆ. ಅದೇ ರೀತಿಯಲ್ಲಿ ನಾನು ಇಲ್ಲಿ ಮಸೂದೆ ಮಂಡನೆ ಮಾಡುತ್ತೇನೆ, ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ. ಕೊಟ್ಟರೆ ನಾನು ತಮಗೆ ಆಭಾರಿಯಾಗುತ್ತೇನೆ. ಮೂರನೇ ಬಾರಿ ನಾನು ಅವಕಾಶವನ್ನು ಕೇಳಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ನಿನ್ನೆ ಮೊನ್ನೆ proceedings ಆಗುವ ವೇಳೆಗೆ ಸಣ್ಣಪುಟ್ಟ disturbances ಬಂದವು. ಆ ಕಡೆಯ ನಮ್ಮೆಲ್ಲಾ ಸ್ನೇಹಿತರು ಒಂದೇ ಸಮನೆ ಆರ್ಭಟ ಮಾಡಿದರು. ಬರಗಾಲದ ಬಗ್ಗೆ ಚರ್ಚೆ ಇಲ್ಲ, ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತಿಲ್ಲ ಎನ್ನುವಂಥ ಎಲ್ಲಾ ರೀತಿಯ ಆರೋಪಗಳನ್ನು ನಮ್ಮ ಮೇಲೆ ಮಾಡಿದರು. ಈ ಬಗ್ಗೆ, ನಮ್ಮ ಮೇಲೆ ಕೆಲವು ಪತ್ರಿಕೆಗಳವರು editorials ಬರೆದರು, ಕೆಲವರು **head lines** ಅನ್ನೇ ಬರೆದರು. ನಾವು ಇಲ್ಲಿ ಎಲ್ಲಾ stop ಮಾಡುತ್ತಿದ್ದೇವೆ ಎಂದು ಬರೆದರು. ಈಗ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದೆ. ಇದರ ಮಧ್ಯದಲ್ಲಿ ನಂಜುಂಡಪ್ಪನವರ ವರದಿಯ ಮೇಲೆ ಚರ್ಚೆ ನಡೆಯುತ್ತಿದೆ. ಇದು political expediency. ತಮ್ಮ ಮಾರ್ಗದರ್ಶನದಲ್ಲಿ, ಮಾನ್ಯ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ನೇತೃತ್ವದಲ್ಲಿ Government strong ಆಗಿದೆ. ನಿಮ್ಮ M.L.A.ಗಳು militant ಆಗಿ ನಿಮ್ಮ ಜೊತೆ ಇದ್ದಾರೆ. ಛೇರ್‌ಮನ್‌ಗಿರಿ ಸಿಕ್ಕದೇ ಹೋದರೆ ಬಿಟ್ಟು ಹೋಗುವವರು ಯಾರೂ ಇಲ್ಲ. ಇದನ್ನು November ನಲ್ಲಿ ತೆಗೆದುಕೊಳ್ಳಿ, ಇದಕ್ಕೆ ಏನು urgent ಈಗ?

(ಅಡಚಣೆ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಲೋಕಸಭೆಯಲ್ಲಿ ತಮ್ಮ 45 ಸ್ಥಾನಗಳನ್ನು ಭದ್ರಪಡಿಸಿಕೊಂಡರು. Communist party ಯ ಅಧ್ಯಕ್ಷ ಸ್ಥಾನಗಳನ್ನು ಭದ್ರಪಡಿಸಿಕೊಂಡರು. ಅಲ್ಲಿ ಈ ರೀತಿ ಭದ್ರಪಡಿಸಿಕೊಂಡು ಇಲ್ಲಿ ಈ ರೀತಿಯ ಉಪದೇಶವನ್ನು ಮಾಡಲು ಬರುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಉಪದೇಶ ಮಾಡಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನೀವಲ್ಲ, ಯಾರು ಉಪದೇಶ ಮಾಡಿದ್ದಾರೋ, ಅವರಿಗೆ ಅನ್ವಯವಾಗುತ್ತದೆ. ನಿಮ್ಮ ಸ್ಥಾನಗಳನ್ನು ಭದ್ರಮಾಡಿಕೊಂಡಿರಿ ಎಂದಷ್ಟೇ ಹೇಳಿದೆ.

(ಅಡಚಣೆ)

ಶ್ರೀ ಎನ್.ಧರಂಸಿಂಗ್: ಈ Bill ವಿರುದ್ಧವಾಗಿ, ನಿಮ್ಮ ಮಿತ್ರ ಪಕ್ಷವಾದ B.J.P.ಯವರು ಲೋಕಸಭೆಯಲ್ಲಿ ಪ್ರೊಟೆಸ್ಟ್ ಮಾಡಿದ್ದಾರೆ. Bill pass ಮಾಡುವಾಗ B.J.P. ಯವರು ಲೋಕಸಭೆಯಲ್ಲಿ protest ಮಾಡಿದ್ದಾರೆ.

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ನೀವೂ ಅದನ್ನು ಮಾಡುತ್ತೀರಿ ಎನ್ನುವುದೂ ಗೊತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್: ನಮ್ಮ ಶಾಸಕರುಗಳಿಗೆ ನಾವು ಹುದ್ದೆ ಕೊಡಬೇಕಾಗಿರ ತಕ್ಕಂಥಾದ್ದು ವಾಸ್ತವಾದುದು. ಹಿಂದಿನ ಎಲ್ಲಾ ಸರ್ಕಾರಗಳು ಇದನ್ನು ಮಾಡಿವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಪ್ರಕಾಶ್‌ರವರೇ, ಒಂದು ನಿಮಿಷ. ಎಷ್ಟೆಷ್ಟು ಹುದ್ದೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ? ನಿಮ್ಮ ಪಕ್ಷಕ್ಕೆ ಎಷ್ಟು ಹುದ್ದೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ? ಆ ಪಕ್ಷಕ್ಕೆ ಎಷ್ಟು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ? ಅದು ಈ ಸದನಕ್ಕೂ ಗೊತ್ತಾದರೆ ಒಳ್ಳೆಯದು. ಅದು ಗುಟ್ಟಾದ ವಿಚಾರವೇನೂ ಅಲ್ಲವಲ್ಲಾ ನಿಗಮಗಳಿಗೆ ನಿಮ್ಮವರಿಗೆ ಎಷ್ಟು ಕೊಡುತ್ತೀರಿ ಅವರಿಗೆ ಎಷ್ಟು ಕೊಡುತ್ತೀರಿ ಎನ್ನುವುದು ಗೊತ್ತಾಗಬೇಕು.

ಶ್ರೀ ಎಂ.ಪಿ. ಪ್ರಕಾಶ್: ನಿಮ್ಮಂಥ ಹಿರಿಯರಿಗೂ ಕೂಡ ಕೊಡಬೇಕು ಎನ್ನುವುದು ನಮ್ಮ ಆಸೆಯಾಗಿದೆ. ನೀವು ಈ ಕಡೆ ಬರುವುದಾದರೆ, ನಿಮಗೆ ಮಂತ್ರಿ ಪದವಿಯನ್ನು ಕೊಡಲೂ ತಯಾರಾಗಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಮ್ಮ ಅಭಿಪ್ರಾಯವೇನೆಂದರೆ, ಈ ಸರ್ಕಾರ ಇನ್ನೂ ಸ್ವಲ್ಪ ದಿವಸ ಇರಬೇಕು ಎನ್ನುವುದಾಗಿದೆ. Important ಆಗಿರುವ Board/Corporations ಕೇವಲ 3-4 ಆಗಿವೆ. ಅವುಗಳಿಗೇ ಎಲ್ಲರೂ compete ಮಾಡುತ್ತಾರೆ. ಒಂದು Boards ಗೆ ಒಬ್ಬರನ್ನು ನೇಮಕ ಮಾಡಲು ಮಾತ್ರ ನಿಮಗೆ ಸಾಧ್ಯವಿದೆ. 3-4 ಜನ ಒಂದನ್ನೇ ಕೇಳುವುದು, ಅವರಿಗೆ ಸಿಗದೇ ಹೋಗುವುದು, ಮತ್ತೆ ಅದರಿಂದ ಭಿನ್ನಮತ ಉಂಟಾಗುವುದು, ಇವೆಗಳೆಲ್ಲಾ ಆಗುತ್ತವೆ. ನಿಮ್ಮ ಸರ್ಕಾರಕ್ಕೆ ತೊಂದರೆಯಾಗಬಾರದು, ನೀವು ನೆಮ್ಮದಿಯಿಂದ ಇರಬೇಕು ಎಂದು ಹೇಳುತ್ತಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್: ಯು.ಪಿ.ಎ. ಸರ್ಕಾರದವರು ಯಾವ ರೀತಿ ನಡೆದು ಕೊಳ್ಳುತ್ತಿದ್ದಾರೆ ಎನ್ನುವುದನ್ನು ನೋಡಿ ಅದರ ಪ್ರಕಾರ ಮಾಡುತ್ತಿದ್ದೇವೆ. ಅವರು Naivel Lignite Company ಯನ್ನು disinvestment ಮಾಡುತ್ತೇವೆ ಎಂದು announce ಮಾಡಿದ 24 ತಾಸುಗಳಲ್ಲಿ D.M.K. ಯವರು ಸರ್ಕಾರದಿಂದ ಹೊರಗೆ ಹೋಗುತ್ತೇವೆ ಎಂದ ಕೂಡಲೇ ಹೇಗೆ yield ಆದರೋ, ಅದೇ ರೀತಿಯಲ್ಲಿ, ಸಮ್ಮಿಶ್ರ ಸರ್ಕಾರದ ನಿಮ್ಮ ಬವಣೆಯಂತೆ ನಾವೂ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತೇವೆ. ಆದ್ದರಿಂದ ಅದರ ಬಗ್ಗೆ ನೀವೇನೂ worry ಮಾಡಿಕೊಳ್ಳಬೇಡಿ.

SRI ARAGA JNANENDRA:- Fine answer.

SRI K.R. RAMESHKUMAR: So, ultimately we are the role models for you.

SRI M.P. PRAKASH: Yes, you are a role model. Yes, we have to go by that.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಪ್ರಕಾಶ್ ಸಾಹೇಬರೇ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಆಗುತ್ತದೆಯೇ ಅಥವಾ close ಆಯಿತೇ ಎನ್ನುವುದನ್ನು ಹೇಳಿಬಿಡಿ. ನಮಗೆಲ್ಲಾ ಹೋಗಲಿಕ್ಕೆ ಹೊತ್ತಾಗುತ್ತದೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಅಂದರೆ, ಈಗಲೇ ನಮ್ಮನ್ನು ನೀವು ಶರಪಂಜರದ ಮೇಲೆ ಮಲಗಿಸಬೇಕು ಎಂದು ಅಂದುಕೊಂಡಿರುವಿರಾ? ನಮ್ಮನ್ನು ಶರಪಂಜರದ ಮೇಲೆ ಮಲಗಿಸಬೇಡಿ.

ಶ್ರೀ ವೈಜನಾಥ ಪಾಟೀಲ್: ಈಗ ಬೇರೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರೋ ಅಥವಾ ಇಲ್ಲವೋ? ತೆಗೆದುಕೊಳ್ಳುವುದಾದರೆ ಯಾವಾಗ ತೆಗೆದುಕೊಳ್ಳುತ್ತೀರಿ? ಸದನ ನಾಳೆಯೂ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್: ತೆಗೆದುಕೊಳ್ಳುತ್ತೇವೆ. ಇದು ಆದಕೂಡಲೇ ತೆಗೆದುಕೊಳ್ಳುತ್ತೇವೆ. ಸದನ ನಾಳೆಯೂ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ಅಭಿಪ್ರಾಯ ಇಷ್ಟೇ. ಅತ್ಯಂತ ಮಹತ್ವವಾದ ವಿಷಯಗಳನ್ನು ಈ ಹಿಂದೆ ನೀವೇ ಪ್ರಸ್ತಾಪ ಮಾಡಿದ್ದು, ಪೂರ್ತಿ ಸದನ ಅದನ್ನು ಒಪ್ಪಿದ್ದು, ಬರಗಾಲ ಮತ್ತು ನಂಜುಂಡಪ್ಪ ವರದಿಯನ್ನು ಚರ್ಚೆ ಮಾಡಬೇಕು, ಚರ್ಚೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿದು, ನಂತರ ಅರ್ಥ ಸಚಿವರೂ ಆದ Deputy Chief Minister ರವರು ವಿಶೇಷವಾದಂಥ announcement ಮಾಡಬೇಕು ಎನ್ನತಕ್ಕಂಥ ಅಪೇಕ್ಷೆ ಎಲ್ಲರದ್ದೂ ಆಗಿತ್ತು. ಅದೇ ರೀತಿ ಈಗ ಇಲ್ಲಿ ಚರ್ಚೆ ನಡೆದಿದೆ. ಈ ಮಧ್ಯದಲ್ಲಿ ಉಪ ಮುಖ್ಯಮಂತ್ರಿಗಳು ಒಂದು Bill pass ಮಾಡಿಕೊಡಿ ಎಂದು ಕೇಳಿದರು, ಅದರಂತೆ ಅದು pass ಆಯಿತು. ನಿನ್ನೆ Financial Bill pass ಆಗಬೇಕೆಂದು ಕೇಳಿದಿರಿ, without controversy ಅದೂ pass ಆಯಿತು. ಹೀಗೆ, ಯಾವುದು ಅವಶ್ಯಕವಿದೆ, ಅದೆಲ್ಲಕ್ಕೂ ನಾವು ಒಪ್ಪುತ್ತಿದ್ದೇವೆ. ಆದರೆ ಈಗ ಮಂಡಿಸಬೇಕೆಂದಿರುವುದನ್ನು ತಡೆಯಬಹುದು, it can wait, ಇದು ಬಹಳ urgent ಏನೂ ಇಲ್ಲ. ಬರಗಾಲದ ವಿಷಯ ಅರ್ಜೆಂಟೋ ಅಥವಾ ಇದು ಅರ್ಜೆಂಟೋ? ನಂಜುಂಡಪ್ಪನವರ ವರದಿಗಿಂತ ಇದು urgent ಆಗಿದೆಯಾ? ಅದಕ್ಕಾಗಿ ತಾವು ದಯವಿಟ್ಟು ಇದನ್ನು ಬದಗಿಟ್ಟು, ಈಗ ಚರ್ಚೆ ಏನು ನಡೆದಿದೆ, ಅದು ಮುಂದುವರೆಯಲು ಅವಕಾಶ ಮಾಡಿಕೊಡಿ, ಅದರಲ್ಲಿ ನಾವೆಲ್ಲರೂ ಕೂಡ ಭಾಗವಹಿಸಬೇಕಾಗಿದೆ. ಇಲ್ಲದಿದ್ದರೆ ನಮಗೆ ಕಷ್ಟವಾಗುತ್ತದೆ. ಇಲ್ಲದಿದ್ದರೆ ನಾವು ಬಾಯ್‌ಕಾಟ್ ಮಾಡಬೇಕಾಗುತ್ತದೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ತಾವು ಈ ಸದನದಲ್ಲಿದ್ದು ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ನಾವು ಬಯಸುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ಕಡೆ ನಮಗೆ ಉಪದೇಶ ಮಾಡುತ್ತೀರಿ, ಮತ್ತೊಂದು ಕಡೆ ನಾವು ಅದಕ್ಕೆ stick on ಆಗಿದ್ದರೆ, ಅದನ್ನು ನಮ್ಮ

weakness ಎಂದು ತಿಳಿದುಕೊಂಡು ಮಧ್ಯದಲ್ಲಿ ಒಂದೊಂದು Bill ತಂದು ತೂರಿಸುತ್ತಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸದನದಲ್ಲಿ ತಾವು ಇದ್ದು, ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ನಾವು ಬಯಸುತ್ತೇವೆ. ಅಲ್ಲಿ ಕಾಂಗ್ರೆಸ್ಸಿನ UPA ಸರ್ಕಾರ ಇದೇ ತರಹವಾಗಿರತಕ್ಕಂಥ ಒಂದು ಮಸೂದೆಯನ್ನು ಮಾಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಲ್ಲಿ ಬಿಜೆಪಿ ಒಪ್ಪಿದ್ದಾರೆಯೇ? ಇಲ್ಲೇಕೆ ಒಪ್ಪುತ್ತಿದ್ದಾರೆ?

ಶ್ರೀ ಎಂ.ಪಿ. ಪ್ರಕಾಶ್: ನೋಡಿ, ಅವರು ನಮಗೆ ಪತ್ರ ಬರೆದಿದ್ದಾರೆ. ಅದನ್ನೂ ಕೂಡ ನಾನು ಓದುತ್ತೇನೆ. ಅಲ್ಲೇನು ಮಾಡಿದ್ದೇವೆಂದು ಹೇಳಿ ಲೋಕಸಭಾ Secretariat ನಿಂದ ನಮಗೆ ಪತ್ರ ಬಂದಿದೆ. ಈ ತರಹದ ರೀತಿಯಲ್ಲಿ ತಾವು ಮಾಡಬೇಕೆನ್ನುವುದೂ ಕೂಡ ಆಗಿದೆ. ಈ ಸನ್ನಿವೇಶದಲ್ಲಿ ನಾನು ಆಶ್ಚರ್ಯಕರವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ನಿನ್ನೆ ನಾವು ಕೇಳಿಕೊಂಡಿದ್ದೆವು, 28ನೇ ತಾರೀಖಿನ ದಿವಸ ಅನಿರ್ಧಿಷ್ಟಾವಧಿವರೆಗೆ ಸಭೆಯನ್ನು ಮುಂದೂಡಬೇಕೆನ್ನುವಂಥ ನಿರ್ಣಯಕ್ಕೆ ಬಂದಿದ್ದೆವು. ಆದರೆ, ತಾವು ಈ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿರುವುದರಿಂದ, ಬರದ ಬಗ್ಗೆ, ಪ್ರವಾಹದ ಬಗ್ಗೆ ಚರ್ಚೆಯಾಗ ಬೇಕಾಗುತ್ತದೆ. ರಾಜ್ಯಪಾಲರು ಭಾಷಣವನ್ನು ದಯಪಾಲಿಸಿದ ನಂತರ ಸಾಯಂಕಾಲ ಚರ್ಚೆಗೆ ಅವಕಾಶ ಕೊಡಿ, ನಮ್ಮ ಮಸೂದೆಯನ್ನು ಇಲ್ಲಿ ಪಾಸ್ ಮಾಡಿದ ನಂತರ ನಾವು ಮತ್ತೆ ವಿಧಾನಪರಿಷತ್ತಿಗೆ ಇದನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ನೀವು ವಿಧಾನಪರಿಷತ್ತಿನಲ್ಲಿ ಏನಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಅಕಸ್ಮಾತ್ ಏನಾದರೂ ವ್ಯತಿರಿಕ್ತವಾದರೆ ಇಲ್ಲಿಗೆ ಮತ್ತೆ ಬರಬೇಕಾಗುತ್ತದೆ. ಆದ್ದರಿಂದ, ಬರಗಾಲ ಮತ್ತು ಪ್ರವಾಹದಿಂದ ನೊಂದು ಬವಣೆಯಲ್ಲಿರುವ ರೈತರ ಪರವಾಗಿ ನಾವೆಲ್ಲರೂ ಕೂಡ ರಾತ್ರಿ 9.00 ಗಂಟೆಯ ನಂತರವೂ ಕುಳಿತುಕೊಳ್ಳೋಣ.

SRI N. DHARM SINGH: You don't have that commitment.

SRI M.P. PRAKASH: So, let us show our commitment.

ಶ್ರೀ ಎನ್. ಧರ್ಮಸಿಂಗ್: ಬರಗಾಲದ ಬಗ್ಗೆ ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ನಿಮಗೆ ಕಾಳಜಿ ಇಲ್ಲ. ನಿಮಗೆ ಕೇವಲ office of profit bill pass ಮಾಡುವ ಬಗ್ಗೆ ಯೋಚನೆ ಇದೆ.

SRI M.P. PRAKASH: Sir, let us show our commitment by sitting till 12 O' clock or 1 O' clock. If need be, let us sit sir. We don't mind. We have a commitment sir.

ಶ್ರೀ ಎನ್. ಧರ್ಮಸಿಂಗ್: ನಿಮ್ಮೆಲ್ಲಾ ಶಾಸಕರು ಬರಗಾಲದ ಬಗ್ಗೆ, ನಂಜುಂಡಪ್ಪ ವರದಿ ಬಗ್ಗೆ discussion ಮಾಡಬೇಕು. ಸಮಯ ಹಾಳಾಗುತ್ತಿದೆ....

ಶ್ರೀ ಎಂ.ಪಿ. ಪ್ರಕಾಶ್: ನಾಳೆ ಕೂಡ ಸದನ ಇದೆ. ರಾತ್ರಿ 12–00 ಗಂಟೆ.....

ಶ್ರೀ ಎನ್. ಧರ್ಮಸಿಂಗ್: ರಾತ್ರಿ 12–00 ಗಂಟೆಯವರೆಗೂ ಕುಳಿತು ಕೊಳ್ಳುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್: ನಾವು ಕುಳಿತುಕೊಳ್ಳುತ್ತೇವೆ ಸರ್. ಈಗ bill pass ಆದ ತಕ್ಷಣ ನಾವು ಇಲ್ಲಿ ಮತ್ತೆ ಕುಳಿತುಕೊಳ್ಳುತ್ತೇವೆ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು: ಎಲ್ಲರೂ ರಾತ್ರಿ 12–00 ಗಂಟೆಯವರೆಗೂ ಇರುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಅದು ನಿಮಗೆ ಬಿಟ್ಟಿದ್ದು ಸರ್.

ಶ್ರೀ ಎನ್. ಧರ್ಮಸಿಂಗ್: ಬಿಲ್ ಪಾಸ್ ಮಾಡಿಕೊಡುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನೀವು ಅದು ಏನು ಮಾಡುತ್ತೀರೋ ಮಾಡಿ ಸರ್. ನಾವು ಮಾತ್ರ ಈ bill ಅನ್ನು ಮಂಡಿಸುತ್ತೇವೆ. ನನ್ನನ್ನು ಉಪಾಧ್ಯಕ್ಷರು ಕರೆದಿದ್ದಾರೆ. ನಾನು bill pass ಅನ್ನು ಮಂಡಿಸುತ್ತೇನೆ. ಅದನ್ನು ತಾವು ವಿರೋಧ ಮಾಡಿ ಸರ್. Bill pass ಆದ ಮೇಲೆ ಬರಗಾಲದ ಬಗ್ಗೆ ಚರ್ಚೆ ಆಗುತ್ತದೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಪ್ರಕಾಶ್‌ರವರೆ, ನನ್ನದೊಂದು ಮಾತಿದೆ. ಈ bill ಬಗ್ಗೆ ಮಾತನಾಡುವುದಿದೆ. ಇನ್ನೂ ಕೂಡ bill pass ಆಗಿಲ್ಲ. ಬಿಜೆಪಿ ಮತ್ತು ಜನತಾದಳ (ಎಸ್)ನ ಯಾರ್ಯಾರಿಗೆ ಯಾವ್ಯಾವ ಸ್ಥಾನ ಎನ್ನುವ ಪಟ್ಟಿ ಪತ್ರಿಕೆಯಲ್ಲಿ ಬಂತು. You violated.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು: ನಿಮ್ಮದೂ ಪಟ್ಟಿ ಬಂದಿತ್ತು.

ಶ್ರೀ ಎನ್. ಧರ್ಮಸಿಂಗ್: ಹಾಗಾದರೆ, ಬೆಳಗಾಂನ ಗಡಿ ಭಾಗಕ್ಕೆ ನೀವು ಏಕೆ ಬಂದಿರಿ?

ಒಬ್ಬ ಮಾನ್ಯ ಸದಸ್ಯರು: ನೀವು ಮುಖ್ಯಮಂತ್ರಿಗಳಾಗಿದ್ದಾಗ ನಿಮ್ಮ ಪಟ್ಟಿಯೂ ಬಂದಿದೆ. ನಿಮ್ಮ ಪಟ್ಟಿ ಬಹಳ ದೊಡ್ಡದಾಗಿತ್ತು.

ಶ್ರೀ ಎನ್. ಧರ್ಮಸಿಂಗ್: ನಿಮ್ಮ ಹಾಗೆ ನಾವು ಮಾಡಲಿಕ್ಕೆ ಹೋಗಲಿಲ್ಲ. ಆದರೆ, ಜಗದೀಶ್ ಶೆಟ್ಟರ್‌ರವರಿಗೆ ಕೇಳುತ್ತೇನೆ, ನಿಮ್ಮ ಅಧ್ವಾನಿಯವರ ಅಧ್ಯಕ್ಷತೆಯಲ್ಲಿ ಪೂರಾ walkout ಮಾಡಿದ್ದಾರೆ. ಈ bill pass ಮಾಡಲಿಕ್ಕೆ ಹೋಗುತ್ತಿದ್ದೀರಿ. ಇದು ನಿಯಮ ರೀತಿಯಲ್ಲಿ ಅಲ್ಲ. ಇದು ಹಠಮಾರಿತನ. ಗಡಿ ಭಾಗದಲ್ಲಿರುವ ಮಹತ್ವದ ಸಮಸ್ಯೆಗಳನ್ನು ಬಿಟ್ಟು.....

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ವಿರೋಧ ಮಾಡುವುದ - ಕ್ಕಂದೇ ವಿರೋಧ ಮಾಡುವ ಅವಶ್ಯಕತೆಯಿಲ್ಲ. ಚರ್ಚೆ ಮಾಡುವುದಿದ್ದರೆ bill ಮೇಲೆ ಚರ್ಚೆ ಮಾಡಿ. ಮಾನ್ಯ ಉಪಾಧ್ಯಕ್ಷರೆ, ಅವರು ಚರ್ಚೆ ಮಾಡುವುದಿದ್ದರೆ ಚರ್ಚೆ ಮಾಡಲಿ. ಬಡವರ ಬಗ್ಗೆ ಚರ್ಚೆಯಾಗಲಿ. ರಾತ್ರಿ 12–00 ಗಂಟೆಯವರೆಗೂ ಕುಳಿತುಕೊಳ್ಳೋಣವಂತೆ.

ಶ್ರೀ ಎನ್.ಧರ್ಮಸಿಂಗ್: ಇವತ್ತಿನ ದಿವಸ ಈ ರೀತಿ ಮಾಡುತ್ತಿದ್ದಾರೆ. ಅದಕ್ಕೆ ನಾವೆಲ್ಲರೂ ಕೂಡ walkout ಮಾಡುತ್ತಿದ್ದೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಅಡಚಣೆ)

ಶ್ರೀ ಬಿ.ಆರ್. ಪಾಟೀಲ್: ಇವರಿಗೆ ಬರಗಾಲದ ಬಗ್ಗೆ, ಹಿಂದುಳಿದ ಭಾಗದ ಅಭಿವೃದ್ಧಿ ಬಗ್ಗೆ ಕಾಳಜಿ ಇಲ್ಲ. ಇವರು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೆ ಬಹಳ ಆಸಕ್ತಿ ಇರುವುದರಿಂದ ನಾವೂ ಕೂಡ ಈ ಸದನವನ್ನು ಬಹಿಷ್ಕಾರ ಮಾಡುತ್ತೇವೆ.

(ಸದಸ್ಯರಾದ ಶ್ರೀ ಬಿ.ಆರ್. ಪಾಟೀಲ್, ಶ್ರೀ ವೈಜನಾಥ್ ಪಾಟೀಲ, ಮಹದೇವ್ ಹಾಗೂ ಡಾ: ಹೆಚ್.ಸಿ. ಮಹದೇವಪ್ಪರವರು ಸದನದಿಂದ ಹೊರ ನಡೆದರು)

ಶ್ರೀ ಆರಗ ಜ್ಞಾನೇಂದ್ರ: ನಿಮಗೆ ಕೇಂದ್ರ ಸರ್ಕಾರದಲ್ಲಿ ಲಾಭದಾಯಕ ಹುದ್ದೆ ಬೇಕು. ಇವರು ರಾಜ್ಯ ಸರ್ಕಾರದಲ್ಲಿ ವಿರೋಧಿಸಬೇಕು. ಇವರದ್ದು ದ್ವಿಮುಖ ನೀತಿ. ನಿಮ್ಮದು ವಿಚಿತ್ರವಾಗಿರತಕ್ಕಂಥ ರಾಜಕೀಯ ನಿಲುವು. ಇಷ್ಟು ವರ್ಷ ದೇಶ ಆಳಿದಂಥ ಒಂದು ಪಕ್ಷ bill pass ಮಾಡಬೇಕಾದರೆ ನಡೆದುಕೊಳ್ಳುವಂಥ ರೀತಿನಾ ಇದು bill ಮೇಲೆ ಮಾತನಾಡಬಹುದಿತ್ತು. ಅದನ್ನು ವಿರೋಧಿಸಬಹುದಿತ್ತು. ಈ ರೀತಿ ಸಭಾತ್ಯಾಗ ಮಾಡುವ ಮೂಲಕ ದ್ವಿಮುಖ ನೀತಿಯನ್ನು ಬಹಿರಂಗಪಡಿಸಿ ಕೊಂಡಿದ್ದಾರೆ.

ಪರ್ಯಾಲೋಚನಾ ಪ್ರಸ್ತಾವ

(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಶ್ರೀ ಎಂ.ಪಿ. ಪ್ರಕಾಶ್: ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್‌ಪರಿಗಣನೆಗೆ ಹಿಂದಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ ಅನರ್ಹತೆಯನ್ನು ತಡೆಗಟ್ಟುವ ತಿದ್ದುಪಡಿ ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ"

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಎಂ.ಪಿ. ಪ್ರಕಾಶ್: ಈ ವಿಧೇಯಕ ಈಗಾಗಲೇ ನಮ್ಮ ಉಭಯ ಸದನಗಳಲ್ಲಿಯೂ ಕೂಡ pass ಆಗಿರುವಂಥದ್ದು ತಮಗೆ ಗೊತ್ತಿದೆ. ಆದರೆ, ರಾಜ್ಯಪಾಲರು ಈ ವಿಚಾರದಲ್ಲಿ 3 ಆಕ್ಷೇಪಣೆಗಳನ್ನು ಎತ್ತಿ, ಅದರ ಮೂಲಕವಾಗಿ ಅವರು ಒಂದು ಸಂದೇಶವನ್ನು ನಮಗೆ ಕಳುಹಿಸಿಕೊಟ್ಟರು. ಆ ಸಂದೇಶದ ಪ್ರಕಾರ ಈ ವಿಧೇಯಕದಲ್ಲಿ ಪೂರ್ವಾನ್ವಯವಾಗುವಂತೆ ನೀವು ಕೆಲವು clause ಗಳನ್ನೆಲ್ಲಾ ಸೇರಿಸಿದ್ದೀರಿ, ಯಾರು ಅಧಿಕಾರವನ್ನು ಅದು elected ಅಲ್ಲದೇ ಇರತಕ್ಕಂಥದ್ದನ್ನು ತೆಗೆದುಕೊಂಡಾಗ ಯಾವುದೇ ಕಾನೂನಿನಲ್ಲಿ ಪೂರ್ವಾನ್ವಯವಾಗುವಂಥ ರೀತಿಯಲ್ಲಿ ಮಾಡಿರತಕ್ಕಂಥದ್ದು ಸರಿಯಾದುದಲ್ಲ. ಮತ್ತೆ, ಇನ್ನೊಂದು ಮುಖ್ಯವಾಗಿರತಕ್ಕಂಥ ವಿಷಯ, ನೀವು ಯಾವುದೇ ಅರೆ ನ್ಯಾಯಾಲಯ ಅಥವಾ ನ್ಯಾಯಾಲಯದ ತೀರ್ಪುಗಳೂ ಕೂಡ ಇದಕ್ಕೆ ಅನ್ವಯವಾಗುವುದಿಲ್ಲ ಅನ್ನುವಂಥ ರೀತಿಯಲ್ಲಿ ಕೂಡ ಆ ತೀರ್ಪುಗಳು ನಿಷ್ಕ್ರಿಯವಾಗುವಂಥ (nullify) ರೀತಿಯಲ್ಲಿ ತಾವು ಇದರಲ್ಲಿ ತಿದ್ದುಪಡಿಯನ್ನು ತಂದಿದ್ದೀರಿ. ಈ ಎಲ್ಲಾ ಕಾರಣಗಳಿಗಾಗಿ, ಪುನರ್ ಪರಿಶೀಲನೆಯನ್ನು ಮಾಡಬೇಕೆಂದು ಹೇಳಿ ಅವರು ವಿಧಾನ ಮಂಡಲಕ್ಕೆ ವಾಪಸ್ಸು ಕಳುಹಿಸಿಕೊಟ್ಟಿರತಕ್ಕಂಥದ್ದರ ಬಗ್ಗೆ ನಾನು ಈಗಾಗಲೇ ತಮಗೆ ಹೇಳಿದ್ದೇನೆ. ಇಲ್ಲಿ ಅವರು ಹೇಳತಕ್ಕಂಥದ್ದು ಒಂದನೆಯದು,

> "It may be appropriate to refer to the purpose and the spirit behind the disqualification clause of persons, holding office of profit. The exceptions that may be provided by a statutes framed in accordance with the provision ought to be evidently in consonance with the spirit of the Constitution."

ಆ ರೀತಿ 1956ರಲ್ಲಿ ತಾವೇನು ಕಾನೂನು ಮಾಡಿದ್ದೀರಿ, ಆ ಕಾನೂನಿನಲ್ಲಿ ಪಟ್ಟಿ ಮಾಡಿರತಕ್ಕಂಥ schedule ನ ವಿಚಾರಗಳನ್ನು ಬಿಟ್ಟು ಬೇರೆ ವಿಚಾರಗಳನ್ನೂ ಕೂಡ ಪ್ರಸ್ತಾಪ ಮಾಡಿರುವುದರಿಂದ ಅದು ಸಂವಿಧಾನಕ್ಕೆ ಅದರ ಆಶಯಕ್ಕೆ ಅನುಗುಣವಾದಂಥ ರೀತಿಯಲ್ಲಿಲ್ಲ. ಆದ್ದರಿಂದ, ಇದನ್ನು ಪುನರ್‌ಪರಿಶೀಲನೆ ಮಾಡಬೇಕೆನ್ನತಕ್ಕಂಥದ್ದನ್ನು ಮಾನ್ಯ ರಾಜ್ಯಪಾಲರು ಕಳುಹಿಸಿಕೊಟ್ಟಿದ್ದಾರೆ. ಈ ಪತ್ರವನ್ನು July 22 ನೇ ತಾರೀಖು ಕಳುಹಿಸಿಕೊಟ್ಟಿದ್ದಾರೆ. ಇದೇ ರೀತಿಯಾಗಿ ಮಾನ್ಯ ರಾಷ್ಟ್ರಪತಿಗಳೂ ಕೂಡ ಲೋಕಸಭೆಯಲ್ಲಿ ಮಾಡಿದಂಥ ಆ ಒಂದು ವಿಧೇಯಕವನ್ನು ಪುನರ್‌ಪರಿಶೀಲನೆ ಮಾಡಿ ಎಂದು ಕಳುಹಿಸಿಕೊಟ್ಟರು. ಹಾಗೆ ಕಳುಹಿಸಿಕೊಟ್ಟಿರತಕ್ಕಂಥ ಹಿನ್ನೆಲೆಯಲ್ಲಿ ಅವರು ಮತ್ತೆ ಪುನರ್‌ಪರಿಶೀಲನೆ ಮಾಡುವಾಗ ಲೋಕಸಭೆಯಲ್ಲಿ ಕೂಡ ಯಾವುದೇ ತಿದ್ದುಪಡಿಯನ್ನು ಮಾಡಬೇಕಾದಂಥ ಅವಶ್ಯಕತೆಯಿಲ್ಲ, ಇಲ್ಲಿ ಯಥಾವತ್ತಾಗಿ ಕೂಡ ನಾವು ವಾಪಸ್ಸು ಕಳುಹಿಸುತ್ತೇವೆಂದು ಕಳುಹಿಸಿದ ಮೇಲೆ ರಾಷ್ಟ್ರಪತಿಗಳು ಅಂಕಿತವನ್ನು ಹಾಕಿದರು. ಹಾಗೆ ಅಂಕಿತ ಹಾಕಿದ ಮೇಲೆ ಕಾಂಗ್ರೆಸ್ಸಿನ ಮಾನ್ಯ ಹಿರಿಯ ಸದಸ್ಯರುಗಳು ಜಂಟಿ select committee ಗೆ ಇದನ್ನು ಕಳುಹಿಸಿಕೊಡಿ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಆದರೆ, ಜಂಟಿ select committee ಗೆ ಕಳುಹಿಸಿಬೇಕಾಗಿರತಕ್ಕಂಥದ್ದು ಅವರ ಮುಂದೆ ಅನರ್ಹತೆ ಎಂದರೇನು? ಅದರ ಬಗ್ಗೆ ಯಾವುದೇ ವ್ಯಾಖ್ಯಾನವನ್ನು ಮಾಡಿಲ್ಲ. ಇದಕ್ಕೆ ವಿವಿಧ ರಾಜ್ಯಗಳಲ್ಲಿರತಕ್ಕಂಥವರೂ ಕೂಡ ಯಾವುದೇ ಅಭಿಪ್ರಾಯವನ್ನು ಸೂಚನೆ ಮಾಡುತ್ತಾರೆ, ಆ ಅಭಿಪ್ರಾಯದ ಪ್ರಕಾರವಾಗಿ ನೀವು ಕೆಲಸ ಮಾಡಬೇಕೆನ್ನುವಂಥ ರೀತಿಯಲ್ಲಿ ಮಾಡಿ ಮಾನ್ಯ ಸರಡಗಿಯವರನನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರೂ ಕೂಡ ನಮ್ಮ ಮಾನ್ಯ ಕಾರ್ಯಾಂಗದ ಸಚಿವಾಲಯಕ್ಕೆ Joint Parliamentary Committee to examine the Constitutional and legal position relating to the office of Profit ಎಂದು ಹೇಳಿ ಅವರು ನಮಗೊಂದು ಪತ್ರ ಕೂಡ ಬರೆದಿದ್ದಾರೆ.

> "To examine in context of the settled interpretations of the expression, Office of Profit, in Article 102 of the Constitution and the underlined Constitutional principles therein and to suggest a comprehensive definition of Office of Profit."

ಇಲ್ಲಿಯವರೆಗೂ ನಮ್ಮ 1956ರ ಕಾನೂನಾಗಿರಬಹುದು ಅಥವಾ ಬೇರೆ ರಾಜ್ಯಗಳಲ್ಲಿ ಬರೆದಿರುವ ಕಾನೂನುಗಳಲ್ಲಾಗಿರಬಹುದು, ಬಹಳ ಸ್ಪಷ್ಟವಾದಂಥ ರೀತಿಯಲ್ಲಿ what constitute Office of Profit ಅನ್ನತಕ್ಕಂಥದ್ದರ ಬಗ್ಗೆ ನಿರ್ದಿಷ್ಟವಾದಂಥ ವ್ಯಾಖ್ಯಾನ ಆಗಿಲ್ಲ, definition ಬಂದಿಲ್ಲ. ಆ ಕಾರಣಕ್ಕಾಗಿ, ಅದನ್ನು ರಾಜ್ಯಾಂಗದಲ್ಲಿ 102ರ ಕೆಳಗೆ ಯೋಚನೆ ಮಾಡಿ ಎಂದು ಹೇಳಿದ್ದಾರೆ. ಇಲ್ಲಿ ನಮಗಿರುವಂಥದ್ದು, 191–ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯಲ್ಲಿರತಕ್ಕಂಥದ್ದರಲ್ಲಿ ಕೂಡ ನಾವು ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ.

ನಮ್ಮ constitutional amendmentಗೆ, ರಾಜ್ಯಾಂಗದ ಪರವಾಗಿ ಬರತಕ್ಕಂಥದ್ದು, ಅದಕ್ಕೆ ಅನುಸಂದಾನವಾಗಿರತಕ್ಕಂಥ 102ಕ್ಕೆ ಅನುಗುಣ ವಾಗುವಂಥದ್ದು, 191ನಮ್ಮ ರಾಜ್ಯಾಂಗದಲ್ಲಿರತಕ್ಕಂಥ constitutional provision ಅದು. ಅದರ ಕೆಳಗೆ, ಅವರು ಈ ಮಾತನ್ನು ಹೇಳುತ್ತಾರೆ. Disqualification for membership: "A person shall be disqualified for being chosen as and being a member of the Legislative Assembly or Legislative Council of the State if he owns any office of profit under the Government of India or the Government of any States specified in the first schedule other than an office declared by legislature of the state by law not disqualify its holder. If he is unsound of mind or if he is undischarged insolvent"... ಈ ವಿಚಾರಗಳನ್ನು ಹೇಳಿ, "If he is so disqualified by or under any law made by the Parliament". ಸಂವಿಧಾನದ 102ರ ಕಲಂ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರುಗಳಿಗೆ ಅನ್ವಯವಾಗುತ್ತದೆ, 191ರ ಕಲಂ ನಮ್ಮ ರಾಜ್ಯಾಂಗದ ಪ್ರಕಾರ, ರಾಜ್ಯದಲ್ಲಿರತಕ್ಕಂಥ ನಮ್ಮ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ, ಅನ್ವಯವಾಗತಕ್ಕಂಥದ್ದು ಆಗಿರುವುದರಿಂದ, ಅವರು ಇದರ ಬಗ್ಗೆ ಸಂಪೂರ್ಣವಾದ ಚರ್ಚೆಯಾಗಲಿ ಎಂದು joint select committee ಗೆ ಕಳುಹಿಸಿಕೊಟ್ಟಿರತಕ್ಕಂಥದ್ದು, ಅಲ್ಲಿ ರಾಷ್ಟ್ರಪತಿಗಳು ಅಂಕಿತವನ್ನು ಹಾಕಿ ಕಳುಹಿಸಿದ ನಂತರ, ಈಗಾಗಲೇ ಆ ಮಸೂದೆ ಮಂಜೂರಾತಿ ಆಗಿ ಕಾನೂನು ಆಗಿದೆ. ಅದೇ ಪ್ರಕಾರ ಇಲ್ಲಿರತಕ್ಕಂಥದ್ದರಲ್ಲೂ ಕೂಡ ನಾವು ಅಂತಹ ಒಂದು ಕಾನೂನು ಅನ್ನು ತಂದಾಗ ವಿಸ್ತೃತವಾದ ರೀತಿಯಲ್ಲಿ, ಬಹಳ co-operative society ಮೊದಲಾಗಿರುವಂಥವುಗಳನ್ನು ಬರೆದಿದ್ದೇವೆ. ಈಗ ಅಷ್ಟು ವಿಷಯಗಳನ್ನು

ಹೇಳಬೇಕಾದಂಥ ಅಗತ್ಯವಿಲ್ಲವೆಂದು ಹೇಳಿ, ಒಂದು ತಿದ್ದುಪಡಿಯ ಮುಖಾಂತರ ಈ ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ. ಆ ತಿದ್ದುಪಡಿ ಏನೆಂದರೆ:-

ಖಂಡ 2 ಕ್ಕೆ ತಿದ್ದುಪಡಿ

(1) (2)ನೇ ಖಂಡ (5)ನೇ ಉಪಖಂಡದಲ್ಲಿ (ಡಿ) ಬಾಬ್ತಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು. ಎಂದರೆ:-

> "(ಡಿ) ಯಾವುದೇ ಸಮಿತಿಯ (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ಅಥವಾ ಸಂಘಗಳ ನೋಂದಣಿಗೆ ಸಂಬಂಧಪಟ್ಟ ಯಾವುದೇ ಇತರ ಕಾನೂನಿನಡಿಯಲ್ಲಿ ನೋಂದಾಯಿತವಾದ ಯಾವುದೇ ಸಂಘದ ಆಡಳಿತ ಮಂಡಲಿಯ ಚೇರ್ಮನ್, ವೈಸ್ ಚೇರ್ಮನ್, ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕ, ಅಥವಾ ಸದಸ್ಯ, ಮೇಲ್ಕಂಡ ಹುದ್ದೆಗಳನ್ನು ಯಾವುದೇ ಹೆಸರಿನಲ್ಲಿಯಾದರೂ ಕರೆದಿರಲಿ, ಅವುಗಳು"

ಎಂದು ಅದನ್ನು ಪ್ರತಿಯೋಜಿಸಬೇಕು ಎನ್ನುವ ತಿದ್ದುಪಡಿ. ಇಲ್ಲಿ ನಾನು ಮಾತನಾಡುವಾಗ ಈ ಮಸೂದೆ ಇಲ್ಲಿಯೇ ಪ್ರಾರಂಭವಾಗಿದ್ದು, ಆದ್ದರಿಂದ ಈ ಸಂದರ್ಭದಲ್ಲಿಯೇ ಈ ಒಂದು ತಿದ್ದುಪಡಿಯ ಸಮೇತವಾಗಿ ನಾವು ಕಳುಹಿಸಿಕೊಟ್ಟಾಗ ರಾಜ್ಯಪಾಲರು ಅವರ ವಿವೇಚನೆಗೆ ಬಿಟ್ಟಿರತಕ್ಕಂಥದ್ದು, ನಮ್ಮ ಸರ್ಕಾರದ ನಿರ್ಧಾರದಲ್ಲಿ ಲಾಭದಾಯಕ ಹುದ್ದೆ ಎನ್ನತಕ್ಕಂಥದ್ದು ಏನಿದೆ, ಇದನ್ನು ನಾವು ಹಿಂದೆ ಯಾವ ರೀತಿಯಾಗಿ ನಮ್ಮ ಇಡೀ ಉಭಯ ಸದನಗಳು ಪಾಸ್ ಮಾಡಿದ್ದೆವು, ಅದೇ ರೀತಿಯಾಗಿ ನಮ್ಮ 1956ರ ಕಾನೂನಿಗೆ ಅನುಗುಣವಾಗಿ ರೀತಿಯಲ್ಲಿ ಈ ವಿಷಯವನ್ನು ತಂದಿದ್ದೇವೆ. ದಯವಿಟ್ಟು ಸಭೆ ಈ ಮಸೂದೆಯನ್ನು, ಈಗಾಗಲೇ ಕೇಂದ್ರಸರ್ಕಾರದಲ್ಲಿ ರಾಷ್ಟ್ರಪತಿಗಳು ಒಪ್ಪಿದ ರೀತಿಯಲ್ಲಿಯೇ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಿ ಕಳುಹಿಸಬೇಕಾಗಿದೆ, ಮತ್ತು ಇದನ್ನು ನಾನು ವಿಧಾನಪರಿಷತ್ತಿಗೆ ತೆಗೆದುಕೊಂಡು ಹೋಗಬೇಕಾಗಿರತಕ್ಕಂತ ಅಗತ್ಯತೆ ಇರುವುದರಿಂದ ದಯವಿಟ್ಟು ಸದನದ ಮಹಾ ಸದಸ್ಯರು ಎಲ್ಲರೂ ಕೂಡ ಈ ಮಸೂದೆಗೆ ಅಂಗೀಕಾರವನ್ನು ಕೊಡಬೇಕೆಂದು ನಿಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರೇನು ಕಾರಣಗಳನ್ನು ಕೊಟ್ಟು ಈ ಬಿಲ್‌ನ್ನು ಹಿಂದಕ್ಕೆ ಹಾಕಿದ್ದಾರೆ, ಅದನ್ನು ನಾನು ಸಮರ್ಥಿಸುತ್ತೇನೆ, ಅವರು ನಮ್ಮ ಘನತೆವೆತ್ತ ರಾಜ್ಯಪಾಲರು, ಸಂವಿಧಾನವನ್ನು ಮತ್ತು ರಾಜ್ಯದ ಆಡಳಿತವನ್ನು ಎರಡನ್ನೂ ಅವಲೋಕನವನ್ನು

ಮಾಡಿ, ರಾಜ್ಯದ ಆಡಳಿತ ಮಾಡುವ ಕಡೆ ಯಾವ್ಯಾವ ಶಾಸನಗಳನ್ನು ತಂದರೆ, ಅದರ ಮುಂದಿನ ಪರಿಣಾಮಗಳು ಏನಾಗಬಹುದೆಂದು ಹೇಳಿದ್ದಾರೆ, ಅವರು ಸ್ಪಷ್ಟವಾಗಿ ಹೇಳುತ್ತಾರೆ, ತಾವೇನುಮಾಡಲಿಕ್ಕೆ ಹೊರಟಿದ್ದಿರಿ, ಯಾವುದೇ ಹುದ್ದೆಯಲ್ಲಿ ಇನ್ನು ಮುಂದೆ ಯಾರೇ ಶಾಸಕರಾಗಿದ್ದರೆ ಅವರಿಗೆ ಅನರ್ಹತೆ ಬರುವುದಿಲ್ಲ ಎಂದು The very principle of the Act defeat ಆಗಿ ಹೋಗಿಬಿಡುತ್ತದೆ, ರಾಜ್ಯದಲ್ಲಿ ಇನ್ನು ಮುಂದೆ act ಇಟ್ಟುಕೊಳ್ಳುವ ಅಗತ್ಯತೇನೇ ಇರುವುದಿಲ್ಲ. ಈವರೆಗೆ ಒಂದು act ಅನ್ನು ಇಟ್ಟುಕೊಂಡಿದ್ದು, ನಾವು exemptions ಕೇಳಿಕೊಂಡು ಬಂದಿದ್ದೆವು, ಆದರೆ ಇಂತಿಂಥ ಹುದ್ದೆಗಳನ್ನು ಅಲಂಕರಿಸಿದವರಿಗೆ disqualification effect ಆಗುವುದಿಲ್ಲ ಅಂತ. ಈಗ ತಾವೇನು generalize ಆಗಿ ಬರೆದು ಬಿಟ್ಟಿರಿ, ಯಾವುದೇ ಸೊಸೈಟಿ ಮುಂದೆ ರಿಜಿಸ್ಟರ್ ಆಗಿರುವುದು ಇರಲಿ. corporation, board ಇರಲಿ, ಏನಾದರೂ ಆಗಲಿ, ಇನ್ನು ಮುಂದೆ, the very existence of the Act itself is in question, ambiguity. ಇನ್ನು ಮುಂದೆ ಕರ್ನಾಟಕದಲ್ಲಿ ಈ act nullify ಆಗಿ ಹೋಗಿ ಬಿಡುತ್ತೆ. ಎರಡನೆಯದಾಗಿ ತಾವೇನು amendment ಅನ್ನು propose ಮಾಡಿದಿರಿ, ಅವತ್ತೂ ಕೂಡ ನಾವು ಹೇಳಿದೆವು. ಇದು ಇನ್ನು ಪಾರ್ಲಿಮೆಂಟ್ ಮುಂದೆ ತೀರ್ಮಾನವಾಗಿಲ್ಲ. ರಾಷ್ಟ್ರಪತಿಗಳು ಹಿಂದಕ್ಕೆ ಹಾಕಿದ್ದಾರೆ, refuse ಆಗಿದೆ, ಆತುರ ಆತುರವಾಗಿ ಈ ಬಿಲ್ ಅನ್ನು ತರುವ ಅಗತ್ಯಯಿಲ್ಲವೆಂದು ಹೇಳಿದ್ದೆವು. ಆದರೂ ತಾವು ಕೇಳಲಿಲ್ಲ, ಈ ಬಿಲ್ ಅನ್ನು ತಂದಿರಿ. ಆ ರಾಷ್ಟ್ರಪತಿಗಳ ಅಂಕಿತ ಆಗುತ್ತಿತ್ತೋ ಬಿಡುತ್ತಿತ್ತೋ, ರಾಜ್ಯಪಾಲರು ಅದನ್ನು ಹೇಳುವುದಕ್ಕೆ ಹೋಗಲಿಲ್ಲ, ambiguity ಯನ್ನೂ ರೈಸ್ ಮಾಡುತ್ತಾರೆ. 1957ನಲ್ಲಿ ನೀವೇನು act ಅನ್ನು enact ಮಾಡಿದಿರಿ, bill ಅನ್ನು enact ಮಾಡಿದ್ದಿರಿ, ಅವತ್ತಿನಿಂದ ಇವತ್ತಿನವರೆಗೆ ಈ ಬಿಲ್ ಪಾಸ್ ಆದರೆ disqualification ಗೆ amount ಆಗುವುದಿಲ್ಲ. ನೀವು ರಾಜ್ಯ ಸರ್ಕಾರಗಳು ಬಿಲ್ ಪಾಸ್ ಮಾಡಬೇಕಾದರೆ, prospective effective ಇಟ್ಟುಬಿಟ್ಟು ಮಾಡಬೇಕಾದ್ದನ್ನು ನಾವು ಕೇಳಿದ್ದೇವೆ. ನಾವು ಹುಟ್ಟುವುದಕ್ಕೆ ಮೊದಲೇ ಈ ಶಾಸನ ಸಭೆ ಸೇರುವುದಕ್ಕೆ ಮೊದಲೇ ನಾವು ಶಾಸನ ಮಾಡುತ್ತಿದ್ದೇವೆ. 1956ನೇ ಇಸ್ವಿನಲ್ಲಿ ಏನು act ಮಾಡಿದಿರಿ, ಆ act ಗೆ ಇದು ಅನ್ವಯವಾಗುತ್ತದೆ, ಆ exemption clause ಗೆ ಇದನ್ನೆಲ್ಲಾ ಸೇರಿಸುತ್ತಿದ್ದೇವೆ. ಇಲ್ಲಿ ಯಾರಿಗೂ notice ಬಂದಿಲ್ಲ. ಇಲ್ಲಿ ಯಾರಿಗೂ ಗೌರ್ನರ್ ಮುಂದೆಯಾಗಲಿ, ಎಲೆಕ್ಷನ್ ಕಮಿಷನ್‌ನಿಂದ ಆಗಲಿ ಇಲ್ಲಿರುವ ಯಾವುದೇ ಎಮ್‌ಎಲ್‌ಎ ರವರನ್ನು ಡಿಸ್‌ಕ್ವಾಲಿಫೈ ಮಾಡಿ he holds an office which makes him office of profit ನಲ್ಲಿ ಇದ್ದಾರೆಂದು ನೋಟೀಸ್ ಇಲ್ಲದಿರುವಾಗ ನೀವು

retrospective effective ಆಗಿ ನೀವು ಏಕೆ ಕೇಳುತ್ತಿದ್ದಿರಿ ಎಂಬುದು ನಮಗೆ ಅರ್ಥವಾಗಬೇಕಲ್ಲಾ 1956 ನೇ ಇಸ್ವಿಯಿಂದ ಅನ್ವಯವಾಗುವ ಹಾಗೆ ಒಂದು ಶಾಸನವನ್ನು ಯಾವುದಾದರೂ ರಾಜ್ಯದೊಳಗೆ ಪಾಸ್ ಮಾಡಬಹುದಾ? ಯಾವುದೋ ಒಂದು land reforms act, partition ಹಾಕಿಬಿಡುತ್ತಾರೆ, holding ಇರುವುದನ್ನು ಕಡಿಮೆ ಮಾಡಿಕೊಳ್ಳುತ್ತಾರೆ, ಗಂಡ – ಹೆಂಡತಿ ಡೈವೋರ್ಸ್ ಎಂದು ತೋರಿಸಿಕೊಂಡುಬಿಟ್ಟು, ಒಬ್ಬೊಬ್ಬರಿಗೆ 20,20, standard acre land ತೋರಿಸಿಕೊಳ್ಳುತ್ತಾರೆಂದು ನರಸಿಂಹರಾಯರೊಬ್ಬರು ಅವತ್ತು retrospective effective ನಲ್ಲಿ ಒಂದು ಕಾಯಿದೆ ಕೇಳಿದ್ದರು. ಇವತ್ತು ನೀವು disqualification ಕಾಯಿದೆಗೆ 1956 ನೇ ಇಸ್ವಿಯಿಂದ ಅನ್ವಯವಾಗುವ ಹಾಗೆ ಮಾಡಿ ಎಂದು ಬರೆದು ಕಳುಹಿಸಿದರೆ, ಯಾರಾದರೂ ಗೌರವಯುತ ರಾಜ್ಯಪಾಲರು ಈ ಶಾಸನವನ್ನು ಒಪ್ಪುತ್ತಾರೆಯೇ? What made you to do all this. ಮೂರನೆಯದು, ನೀವು ಯೋಚನೆ ಮಾಡಿ. ಈ ತಿದ್ದುಪಡಿ ಯಾವ ನ್ಯಾಯಾಲಯ, ನ್ಯಾಯ ಮಂಡಲಿಯ ತೀರ್ಪು ಅಥವಾ ಆದೇಶವನ್ನು ಅಥವಾ ಯಾವುದೇ ಇತರ ನ್ಯಾಯಿಕ ಸದೃಶವಾದ ಶಾಸನಾತ್ಮಕ ಪ್ರಾಧಿಕಾರ ಆದೇಶ ಅಥವಾ ಅಭಿಪ್ರಾಯಗಳನ್ನು ಶೂನ್ಯಗೊಳಿಸುವ ಗುರಿಯನ್ನು ಹೊಂದಿದೆ. If at all there is any dispute between any court, the enact act ಇದ್ದ ಹಾಗೆ ನಲ್ಲಿಫೈಡ್ ಜೀರೋ ಆಗಿಬಿಡುತ್ತದೆ, which is under litigation already, ಅದಕ್ಕೂ ಕೂಡ ಅನ್ವಯವಾಗುವ ಹಾಗೆ ನೀವು ಕಳುಹಿಸುತ್ತಿದ್ದೀರಿ. ಯಾರಾದರೂ ಕೋರ್ಟಿನ ಮುಂದೆ ಇದ್ದರೆ, ಪ್ರಾಧಿಕಾರದ ಮುಂದೆ ಇದ್ದರೆ, ಎಲೆಕ್ಷನ್ ಕಮಿಷನ್ ಮುಂದೆ ಇದ್ದರೆ, ಅವರು ಏನು ಮಾಡಬೇಕು? Before the Act, they have taken up the case. You are telling the Court not to continue the case because Act ಆಗಿಬಿಡುತ್ತಲ್ಲಾ ಇದು, 1956ಕ್ಕೆ ನಾವು ಎಫೆಕ್ಟ್ ಕೊಡುತ್ತೇವೆಂದರೆ, can the Court conduct any trial on these matters? ಹಾಗಾದರೆ ಕೋರ್ಟಿಗಳ ಗತಿ ಏನು? ಪ್ರಾಧಿಕಾರದ ಗತಿ ಏನು? What made you to give retrospective effect to this Act? ಇವತ್ತಿನಿಂದ ಮುಂದಕ್ಕೆ ನಾವು ಈ ಕಾಯಿದೆಯನ್ನು ಅನ್ವಯ ಮಾಡುತ್ತೇವೆಂದು ಮಾಡಿ. ಅಕಸ್ಮಾತ್ ನಿನ್ನೆ ಯಾರಾದರೂ ಕೋರ್ಟಿನಲ್ಲಿ ಇದ್ದರೆ, ಕೇಸ್‌ನಲ್ಲಿ ಇದ್ದರೆ ನಿಮಗೇನಾಗಬೇಕಾಗಿದೆ? ನಾಲ್ಕನೆಯದು, ನಾನು ತಮಗೆ ತಕರಾರು ಮಾಡಬೇಕಾಗಿರುವುದು, ಇದು ರಾಷ್ಟ್ರಾಧ್ಯಕ್ಷರಿಂದ ಅಂಗೀಕಾರ ಆಗಿ ಬರುವ ಮೊದಲೇ Joint Parliamentary Committee ಮುಂದೆ ರೆಫರ್ ಆಗಿದೆ,

ಪಾರ್ಲಿಮೆಂಟ್‌ನ ಮುಂದೆ ಕೂಡ ಈಗ ಒಂದು ಕಾಂಟ್ರಾವರ್ಸಿ ರೈಸ್ ಆಗಿಬಿಟ್ಟಿದೆ. ಒಂದು ಬಿಲ್‌ನ್ನು ರಾಷ್ಟ್ರಪತಿಯವರ ಅಂಗೀಕಾರಕ್ಕೆ ಕಳುಹಿಸಿ, ಅದು ಅಂಗೀಕಾರ ಆಗುವ ಮೊದಲೇ ಇಲ್ಲೊಂದು Joint Select Committee ಮಾಡಿಬಿಟ್ಟು, bill ಅನ್ನು refer ಮಾಡಿ ಆಗಿದೆ. ಆ ಕಮಿಟಿಯ ಶಿಫಾರಸ್ಸು ಬಂದ ಮೇಲೆ, that means to say entire parliament view, ಸನ್ಮಾನ್ಯ ಕಾನೂನು ಸಚಿವರೇ, ಅದನ್ನು ಮತ್ತೆ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ, ಇವತ್ತೇನು ರಾಷ್ಟ್ರಪತಿಗಳು ಸಹಿ ಹಾಕಿ ಕೊಟ್ಟಿದ್ದಾರೆ, ಎರಡನೇ ಸಲ ನೀವು ಅಮೆಂಡ್‌ಮೆಂಟ್ ಮಾಡಿ ಕಳುಹಿಸಿದರೆ ಅವರ ಹಾಕಲೇಬೇಕು. He is bound under the constitution. ನಾವು ಇಲ್ಲಿ ಮಾಡಿ ಕಳುಹಿಸಿದರೆ ಗೌರ್ನರ್ ಹಾಕಲೇಬೇಕು. ಮುಂದಿನದು ನಿಮ್ಮ ಹಣೆಬರಹ, ಕೋರ್ಟಿನಲ್ಲಿ constitutional validity ಇದೆಯೋ ಇಲ್ಲವೋ, ಅವರು ಹೇಳಬೇಕಾದ್ದನ್ನು ಹೇಳಿದ್ದಾರೆ. He has advised. ಇದು ಮಾಡಬೇಡಿ ಎಂದು ಹೇಳಿದ್ದಾರೆ, But Parliament has not made this Bill a final Act. ತಾವು ಸ್ಪಷ್ಟವಾಗಿ ಹೇಳಿದ್ದೀರಿ. I appreciate your conviction. ಪಾರ್ಲಿಮೆಂಟ್‌ನಲ್ಲಿ Joint Select Committee ಮುಂದೆ ರೆಫರ್ ಆಗಿರುವಂಥ ಒಂದು ಬಿಲ್ ಅನ್ನು ನೀವು ಇಲ್ಲಿ enact ಮಾಡುತ್ತಿದ್ದೀರಿ. If something goes wrong, Joint Select Committee ಅದಕ್ಕೆ ಏನಾದರೂ ತಿದ್ದುಪಡಿ ತಂದು ಬೇರೆ views ಅನ್ನು ಎಕ್ಸಪ್ರೆಸ್ ಮಾಡಿತು, ಆಗ ಈ ಬಿಲ್‌ನ ಗತಿ ಏನು? ನಿಮ್ಮ actನ ಗತಿ ಏನು? How many times ನೀವು ಇಂತಹ acts ನ್ನು introduced ಮಾಡುತ್ತೀರಿ ಹಿಂದಕ್ಕೆ ತೆಗೆದುಕೊಳ್ಳುತ್ತೀರಿ, ಗೌರ್ನರ್ ಅಫೀಸ್‌ನಿಂದ ರಿಜೆಕ್ಟ್ ಮಾಡಿಸಿಕೊಳ್ಳುತ್ತೀರಿ, ನಾಳೆ ಸುಪ್ರೀಂಕೋರ್ಟಿನಿಂದ ರಿಜೆಕ್ಟ್ ಮಾಡಿಸಿಕೊಳ್ಳುತ್ತೀರಿ, ಇದು ನಮಗೆ ಅರ್ಥವಾಗಲಿಲ್ಲ. Pending trials ಎಲ್ಲವನ್ನೂ ನೀವು question ಮಾಡುವಂಥ Billಗಳನ್ನು ಶಾಸನ ಸಭೆಯಲ್ಲಿ ಪಾಸ್ ಮಾಡಿಬಿಟ್ಟರೆ ಗತಿ ಏನು? I am not against. ಇಲ್ಲಿರುವ ಯಾವುದೇ ಶಾಸಕರಿಗೆ ಒಂದು corporation ನಲ್ಲಿ board ನಲ್ಲಿ ಮತ್ತೊಂದು ಕಡೆ ಕೆಲಸ ಮಾಡಲಿಕ್ಕೆ ಅವಕಾಶ ಕೊಟ್ಟರೆ, ಯಾರೋ ಗೊತ್ತಿಲ್ಲದಿರುವವರಿಗೆ ಕೊಡುವುದಕ್ಕಿಂತ ಉತ್ತಮವಾಗಿ, ಮಾಡುತ್ತಾರೆ. I accept it. ನಾನು ಶಾಸಕನಾಗಿ ಎರಡು ಮೂರು ಸಂಸ್ಥೆಯ ಅಧ್ಯಕ್ಷಗಿರಿ ಮಾಡಿ ನಾನು ಇಲ್ಲಿ ನಿಂತಿದ್ದೇನೆ. ಕೆಎಂಎಫ್ ಅಧ್ಯಕ್ಷನಾಗಿದ್ದವನು, ಅದನ್ನು ವಿರೋಧ ಮಾಡಲಿಕ್ಕೆ ನಿಂತಿಲ್ಲ. Your law has to be foolproof. ನೀವು ಒಂದು ಕಾನೂನು ಮಾಡಿದರೆ, in the eyes of law, in the courts, it has to be upheld. ನಾವು ಇಲ್ಲಿ ಶಾಸನ

ಸಭೆಯಲ್ಲಿ ಕುಳಿತುಕೊಂಡು every time ಎಷ್ಟು ಸಾರಿ ಈ ಅಸೆಂಬ್ಲಿನಲ್ಲಿ ಶಾಸನಗಳನ್ನು ಹೊಡೆದು ಹಾಕುವಂಥ ಶಾಸನಗಳನ್ನು ಮಾಡಿ ಕಳುಹಿಸಿದ್ದೇವೆ. Are we supposed to be called legislators for that? ಶಾಸನ ಸಭೆಯ ಸದಸ್ಯನಾಗಿರಲಿಕ್ಕೆ ಲಾಯಕ್ ಆಗಿದ್ದೇವೆಯೇ ಎನ್ನುವ ಪ್ರಶ್ನೆ ನಮ್ಮ ಮುಂದಿರುವುದು. Every time contradiction to constitution ನಾವು ಅಮೆಂಡಮೆಂಟ್‌ಗಳನ್ನು ಮಾಡಿಲ್ಲವೇ? Yes, he is right ನೀವು ಏನು ಹೇಳಿದಿರಿ ಆರ್ಟಿಕಲ್ 191, 192ನಲ್ಲಿ, ನಿಮಗೆ ಅಧಿಕಾರ ಇಲ್ಲವೆಂದು ಗೌರ್ನ್ನರ್‌ವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ, ನಿಮಗೆ ಅಧಿಕಾರ ಇಲ್ಲ. ಸಂವಿಧಾನಕ್ಕೆ ವಿರುದ್ಧವಾಗಿ ಮಾಡುತ್ತಿದ್ದೀರಿ. ಸಂವಿಧಾನಕ್ಕೆ ಅಮೆಂಡ್‌ಮೆಂಟ್ ಮಾಡಬೇಕಾಗಿರುವ ಪಾರ್ಲಿಮೆಂಟಿನ ಇಷ್ಯೂ ಇನ್ನೂ ಫೈನಲ್ ಆಗಿಲ್ಲ.

ಅದಕ್ಕೆ ನಾವು ಅಮೆಂಡ್‌ಮೆಂಟ್ ಮಾಡೇ ಮಾಡುತ್ತೇವೆಂದರೆ ನಾವೇನೂ ಅದರ ಬಗ್ಗೆ ವಾದ ಮಾಡುವುದಕ್ಕೆ ಆಗುವುದಿಲ್ಲ. ಇಂಥ ಸ್ಥಿತಿಗೆ ಸನ್ಮಾನ್ಯ ಪ್ರಕಾಶ್‌ರವರು ಏಕೆ ಬಂದರೆಂಬುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಅವರು experienced man. ಯಾರೋ ಬೇರೆಯವರು ನಿಂತುಕೊಂಡು ಮಾಡಿದ್ದರೆ, ನಾವು ಪ್ರಶ್ನೆ ಮಾಡುತ್ತಿರಲಿಲ್ಲ. We are not against it. ಒಬ್ಬ ಶಾಸಕ ಅನರ್ಹರಾಗಬೇಕೆಂದು ಕೆಳಮಟ್ಟಕ್ಕೆ ನಿಂತುಕೊಂಡು ಮಾತನಾಡತಕ್ಕಂಥ ಸ್ಥಿತಿ ನನಗೆ ಇಲ್ಲ. ನೀವು ಮಾಡಿ. ನಾವ್ಯಾರೂ ಬೇಡವೆಂದು ಹೇಳಿಲ್ಲ. but, law has to be foolproof so has to stand in the eyes of justice and court. 1956ನೇ ಇಸವಿಯಿಂದ ನಾನು ಅನರ್ಹನಾಗುವುದಿಲ್ಲವೆಂದು 2006 ಅಥವಾ 2007ನೇ ಇಸವಿಯಲ್ಲಿ ಕೋರ್ಟ್ ಮುಂದೆ ಹೋಗಿ ಹೇಳತಕ್ಕಂಥದ್ದು ಹೇಗೆ ಆಗುತ್ತದೆ? ಹಾಗಾದರೆ, ಕೇಸ್ ಫೈಲ್ ಆಗಿದ್ದು ಯಾವತ್ತು? ಲಿಟಿಗೇಷನ್ ಆಗಿದ್ದು ಯಾವತ್ತು? What will the court do? ಕೋರ್ಟ್‌ಗಳ ಸ್ಥಿತಿಗತಿ ಏನು? ಮತ್ತೆ ಯಾವುದಾದರೂ ಪ್ರಾಧಿಕಾರ ಮತ್ತು ಎಲೆಕ್ಷನ್ ಕಮಿಷನ್ ಸ್ಥಿತಿಗತಿ ಏನು? ಆದ್ದರಿಂದ ಇದರ ಬಗ್ಗೆ ತಾವೆಲ್ಲಾ ಯೋಚನೆ ಮಾಡಿ. My honest request ಏನೆಂದರೆ, ಪ್ರಾಸ್ ಪೆಕ್ಟೀವ್ ಎಫೆಕ್ಟ್ ಕೊಟ್ಟು ಈ ಅಮೆಂಡ್‌ಮೆಂಟ್‌ನ್ನು ತೆಗೆದುಕೊಂಡು ಬನ್ನಿ. ಅಂದರೆ, ಇಲ್ಲಿಂದ ಮುಂದಕ್ಕೆ ಅನ್ವಯವಾಗುವುದಿಲ್ಲ. ಇಂತಿಂಥ disqualifications ಗೆ ನಾವು exempt ಮಾಡುತ್ತಿದ್ದೇವೆಂದು ಮತ್ತು ಇದು ನಮ್ಮ ಅಥವಾ ಈ ಶಾಸನ ಸಭೆಯ ಇಷ್ಟವೆಂಬುದನ್ನು ಬಿಟ್ಟು ಕನಿಷ್ಠ ಸೌಜನ್ಯವನ್ನು ರಾಜ್ಯಪಾಲರಿಗೆ ತಾವು ತೋರಿಸಿ ರಾಜ್ಯದ ಇಂಟ್ರೆಸ್ಟ್‌ನಿಂದ ಈ ಅಮೆಂಡ್‌ಮೆಂಟ್‌ನ್ನು ಮಾಡಬಾರದೆಂದು ಮಾನ್ಯ

ರಾಜ್ಯಪಾಲರು ಹೇಳಿದ್ದಾರೆ. ರಾಜ್ಯಪಾಲರು ಇದರಿಂದ ಏನೂ ಕಳೆದುಕೊಳ್ಳುತ್ತಿರಲಿಲ್ಲ. ಮತ್ತೆ ಅವರೇನೂ ಪರ್ಸ್‌ನಿಂದ ಕೊಡುತ್ತಿರಲಿಲ್ಲ. My honest request to you is, prospective effect ನಿಂದ ಈ ಬಿಲ್ ತಂದು ಪಾಸ್ ಮಾಡಿದರೆ ನಮ್ಮೆಲ್ಲರಿಗೂ ಗೌರವವೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. Retrospective effect ಕೊಡತಕ್ಕಂಥ ಸ್ಥಿತಿ ಇನ್ನೂ ಕರ್ನಾಟಕದಲ್ಲಿ ಯಾರಿಗೂ ಬಂದಿಲ್ಲ. Why are you forcing it? ಈವರೆಗೆ ನನಗೆ ತಿಳಿದ ಮಟ್ಟಿಗೆ ಯಾರೇ ಒಬ್ಬ ಶಾಸಕರ ಮೇಲೆ disqualificationಗೆ ಅರ್ಜಿ ಹಾಕಿಲ್ಲ. ಮತ್ತೆ ಕೋರ್ಟ್ ಮುಂದೆ ಯಾವುದೇ ಕಟ್ಲೆ ಕೂಡ ಇಲ್ಲ. ಆದ್ದರಿಂದ ಈ ದಿನಾಂಕದಿಂದ Law ಮಾಡಿಕೊಂಡರೆ ಏನಾಗುತ್ತದೆ? Why you are insisting since 1956? ತಾವು ಇದನ್ನು ಮರುಪರಿಶೀಲನೆ ಮಾಡಬೇಕಾಗುತ್ತದೆ. ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ, not only this House, ಮಾನ್ಯ ರಾಜ್ಯಪಾಲರಿಗೆ ನಾವು ಬಹಳ ಗೌರವ ಘನತೆ ಕೊಟ್ಟು Constitutional Head for the State ಇಟ್ಟುಕೊಂಡಿರತಕ್ಕಂಥ ಇಡೀ ರಾಜಭವನದ ಕಿಮ್ಮತ್ತನ್ನೇ ನಾವು ಕಳೆದಂತಾಗುತ್ತದೆ. ಕೊನೇ ಪಕ್ಷ ಒಬ್ಬ ರಾಜ್ಯಪಾಲರು ಕುಳಿತುಕೊಂಡು ನೋಡುತ್ತಿದ್ದಾರೆ. ಮತ್ತೆ ಇಂಥದೊಂದನ್ನು ಅಬ್ಸರ್ವ್ ಮಾಡಿದ್ದಾರೆ. ನಮ್ಮ ಲಾ ಡಿಪಾರ್ಟ್‌ಮೆಂಟ್ ಮಾಡಿರದೇ ಇರತಕ್ಕಂಥ ಕೆಲಸವನ್ನು ಮತ್ತು ಶಾಸನ ಸಭೆ ಮಾಡಿರದೇ ಇರತಕ್ಕಂಥ ಕೆಲಸವನ್ನು Governor of the State identify ಮಾಡಿ ಇಲ್ಲಿಗೆ ಕಳುಹಿಸಿದ್ದಾರೆಂದರೆ ಅದಕ್ಕೆ ಗೌರವ ಕೊಡತಕ್ಕಂಥದ್ದು ಈ ಸಭೆಯ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಅವರ ಒಪೀನಿಯನ್‌ಗೆ ನನ್ನ ಸಹಮತ ವ್ಯಕ್ತಪಡಿಸುತ್ತಾ, I request the Honorable Law Minister to withdraw this bill. ಮತ್ತೆ retrospective effect ಎಂದು ತಾವು ಏನು ಹೇಳಿದ್ದೀರಿ, ಅದನ್ನು ಕನಿಷ್ಠಪಕ್ಷ prospective effect ಆಗಿ ಮಾಡಿದರೆ, ಲಿಟಿಗೇಶನ್‌ಗಳಿಗೆ ಸಂಬಂಧಪಟ್ಟಂಥ ಕೇಸ್‌ಗಳಿಗೆ ಅಂದರೆ, ಕೋರ್ಟ್ ವ್ಯಾಪ್ತಿಗೆ ಕೈ ಹಾಕಿದಂತೆ ಆಗುವುದಿಲ್ಲ. ಮತ್ತೆ already pending trialsಗೆ ನಾವು ತೆರೆ ಎಳೆದಂತಾಗುವುದಿಲ್ಲವೆಂದು ರಿಕ್ವೆಸ್ಟ್ ಮಾಡುತ್ತಾ ತಾವು ಇದರ ಬಗ್ಗೆ ಏನಾದರೂ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಂಥ ಶಾಸನಗಳನ್ನು ಮಾಡಬೇಕಾದರೆ ಯಾವುದೋ ಒಂದು ದೃಷ್ಟಿಯಿಂದ ಮಾಡಬಾರದು, ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಏಕೆಂದರೆ ನಮ್ಮನ್ನು ನೋಡಿದವರು ನಗಬಾರದು. ಯಾವುದೋ ಬೋರ್ಡ್ಸ್ ಅಂಡ್ ಕಾರ್ಪೊರೇಶನ್ಸ್‌ಗಳಿಗೆ ಅಧ್ಯಕ್ಷರನ್ನಾಗಿ ಮಾಡುವುದಕ್ಕೋಸ್ಕರ ಗೌರ್ನರ್‌ವರು ಹೇಳಿದ್ದನ್ನೂ ಸಹ ಕೇಳುವುದಿಲ್ಲ, ರಾಷ್ಟ್ರಪತಿ

ಹೇಳಿರುವದನ್ನೂ ಕೇಳುವುದಿಲ್ಲ. ಮತ್ತೆ ಸಂವಿಧಾನದಲ್ಲಿರುವುದನ್ನು ಕೇಳುವುದಿಲ್ಲವೆಂದು ಮಾಡಿಕೊಂಡು ಹೋಗುತಕ್ಕಂಥ ಸ್ಥಿತಿಯನ್ನು ಮಾಡಿಕೊಂಡಿದ್ದೀರಿ. ಇಷ್ಟು ಹೇಳಿದಾಗ್ಯೂ ಕೂಡ ನಿಮಗೆ ಆಸಕ್ತಿ ಇದ್ದರೆ, Joint Parliamentary Committee report ಬರುವವರೆಗಾದರೂ ತಾವು ಕಾಯಬೇಕು. ಅಥವಾ ಏನು ಎರಡು-ಮೂರು ಕ್ಲಾಜ್‌ನ್ನು ಮಾನ್ಯ ರಾಜ್ಯಪಾಲರು ತಮಗೆ ಏನು ಬರೆದು ಕಳುಹಿಸಿದ್ದಾರೆ, ಅದಕ್ಕೇನಾದರೂ ಪರಿಹಾರವನ್ನು ಕಂಡು ಹಿಡಿದುಕೊಂಡು ಈ ಬಿಲ್‌ನ್ನು ಪಾಸ್ ಮಾಡಿ ಎಂದು ನಿವೇದನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಇಷ್ಟೊಂದು ತರಾತುರಿಯಲ್ಲಿ ಈ ಬಿಲ್‌ನ್ನು ತರತಕ್ಕಂಥ ಮೂಲಭೂತವಾದ ಉದ್ದೇಶವಾದರೂ ಏನಿತ್ತು? ಜಂಟಿ ಸಲಹಾ ಸಮಿತಿಯ ವರದಿ ಬರುವವರೆಗೂ ಸ್ವಲ್ಪ ಸಾವಧಾನವಾಗಿ ಕಾಯಬಹುದಿತ್ತು. ಮತ್ತೆ ಮಾನ್ಯ ರಾಜ್ಯಪಾಲರ ಮೇಲೆ ಗೌರವ ಅಪಾರವಾದ ವಿಶ್ವಾಸದಿಂದ ಇವರು ಮಾತನಾಡಿದ್ದಾರೆ. ಈ ಮಸೂದೆಯನ್ನು ಅವರು ಹಿಂದಕ್ಕೆ ಕಳುಹಿಸಿರುವಾಗ ಅದನ್ನು ಗಮನಲ್ಲಿಟ್ಟುಕೊಂಡು ಎಲ್ಲಾ ರೀತಿಯಲ್ಲಿ ಪರಿಹಾರಲೋಚನೆ ಮಾಡಿ ಮಾಡತಕ್ಕಂಥದ್ದು ಬಹಳ ಪ್ರಾಮುಖವಾದಂಥದ್ದು ಆಗಿದೆ. ಆದರೆ, ನನಗೆ ಅನಿಸುವುದೇನೆಂದರೆ, ಇವರು ತರಾತುರಿಯಿಂದ ಇಲ್ಲಿ ವಿಶೇಷ ಅಧಿವೇಶನ ಕರೆದಿರುವುದನ್ನು ನೋಡಿದರೆ, ನಾನು ಇದರ ಬಗ್ಗೆ ಬಹಳ ಉದಾರವಾಗಿ ಮಾತನಾಡುವುದಾದರೆ, ಈ ಮಸೂದೆಗಳನ್ನೆಲ್ಲಾ ಇಲ್ಲಿ ಮಂಡಿಸತಕ್ಕಂಥದ್ದು ಸರಿಯಲ್ಲ. ಈ ಭಾಗಕ್ಕೆ ಸಂಬಂಧಪಟ್ಟಂತಹ ಜನರ ಬಗ್ಗೆ ಮಾತ್ರ ಸೀಮಿತವಾದಂತಹ ಚರ್ಚೆ ಮಾಡುವ ಉದ್ದೇಶದಿಂದ ಇಲ್ಲಿ ಅಧಿವೇಶನ ಕರೆಯಲಾಗಿದೆ. ಚರ್ಚೆ ಆಗಬಾರದೆಂಬುದು ನನ್ನ ಉದ್ದೇಶವೇನಲ್ಲ. ಆದರೆ, ಬೆಳಗಾವಿಯಲ್ಲಿ ಅಧಿವೇಶನ ಕರೆಯತಕ್ಕಂಥ ಉದ್ದೇಶವಾದರೂ ಏನು ಎನ್ನತಕ್ಕಂಥದ್ದು ಎಲ್ಲೋ ಒಂದು ಕಡೆ ಇದೆ. ಬೆಳಗಾವಿ ಸೇರಿದಂತೆ ಉತ್ತರ ಕರ್ನಾಟಕ ಮತ್ತು ಗಡಿಭಾಡಿನ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಒಂದು ಹೊಸ ದಿಕ್ಕು ತಲುಪತಕ್ಕಂಥ ಕೆಲಸ ಆಗಬೇಕು. ಎರಡನೆಯದು ಏನೆಂದರೆ ಡಾ: ನಂಜುಂಡಪ್ಪ ವರದಿ ಬಗ್ಗೆ ಮತ್ತು ಬೆಳಗಾವಿ ಅಭಿವೃದ್ಧಿ ಬಗ್ಗೆ ಸರ್ಕಾರ ಏನು ಉತ್ತರ ಕೊಡುತ್ತದೆ? ಅಂದರೆ, ಇಲ್ಲಿನ ಅಭಿವೃದ್ಧಿ ಬಗ್ಗೆ ಎಷ್ಟು ಹಣ ಇಟ್ಟಿದ್ದಾರೆ ಎಂಬುದು ಮತ್ತು ಡಾ: ನಂಜುಂಡಪ್ಪ ವರದಿ ಎಷ್ಟು ಜಾರಿ ಮಾಡುತ್ತೇವೆ ಎನ್ನತಕ್ಕಂಥ ಉತ್ತರಕ್ಕಾಗಿ ನಾವೆಲ್ಲರೂ ಬಹಳ ಅತ್ಯಂತ ಗಂಭೀರವಾಗಿ ಕಾದಿದ್ದೇವೆ. ಈ ಒಂದು ಶಾಸಕರುಗಳಿಗೆ ನಿಗಮ ಮತ್ತು ಮಂಡಳಿಗೆ ನೇಮಕ ಮಾಡಿದಾಗ ಅವರ ಸದಸ್ಯತ್ವಕ್ಕೆ ತೊಂದರೆ ಆಗದಿರಲೆಂದು ಇದನ್ನು ತರಾತುರಿಯಲ್ಲಿ ತರುವುದಕೆ

ಏನಾದರೂ ನಿಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಬಿರುಕು ಅಥವಾ ತೊಂದರೆ ಆಗಿದೆಯೇ? ಎರಡು ಪಕ್ಷದ ಸದಸ್ಯರುಗಳಲ್ಲಿ ನಮಗೆ ಮಂತ್ರಿಮಂಡಲದಲ್ಲಿ ಯಾವುದೇ ಸ್ಥಾನ ಕೊಟ್ಟಿಲ್ಲವೆಂದು ಅನೇಕರಿಗೆ ತೊಂದರೆ ಆಗಿದೆ. ಇದು ನನಗೆ ಗೊತ್ತಿದೆ. ಅನೇಕ ಪ್ರಭಾವಿತರಾಗಿರುವಂಥವರು ಮಂತ್ರಿಗಳು ಆಗಬೇಕಾಗಿತ್ತು. ಆದರೆ ಆಗಲಿಲ್ಲ ನಿಜವಾಗಿಯೂ ತೊಂದರೆಗಳಾಗಿವೆ. ಈ ತೊಂದರೆ ಬಹಳ ದಿವಸ ತಲುಪದೆ ಮೂಲಭೂತವಾಗಿ ಈ ಸರ್ಕಾರ ಬಿದ್ದು ಹೋಗತಕ್ಕಂಥ ವಿಚಾರ ಏನಾದರೂ ಇದೆಯೇ? ಇದನ್ನು ತರಾತುರಿಯಲ್ಲಿ ತರತಕ್ಕಂಥದ್ದು ಯಾವ ಉದ್ದೇಶಕ್ಕಾಗಿ ಮತ್ತು ಏನು ಕಾರಣವೆಂದು ನಾನು ತಮ್ಮಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಿಗಮ ಮಂಡಳಿಗೆ ಭಾರತೀಯ ಜನತಾ ಪಕ್ಷದವರು ಮತ್ತು ಜಾತ್ಯಾತೀತ ಜನತಾ ಪಕ್ಷದವರು ಎಷ್ಟು ಸದಸ್ಯರುಗಳಿಗೆ ಏನೇನು ಕೊಡಬೇಕೆಂದು ನೀವು ಚಿಂತನೆ ಮಾಡಿದ್ದೀರಿ?

ಶ್ರೀ ಎಂ.ಪಿ. ವೆಂಕಟೇಶ್: ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿರಲಿಲ್ಲವೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವೆಂಕಟೇಶ್‌ನವರೆ, ತಾವು ಈಗ ಮಾತನಾಡಲೇಬೇಕಾಗಿದೆ. ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನೀವೆಲ್ಲರೂ ಬಹಳ ಕಾದಿದ್ದೀರಿ. ನಿಜವಾಗಿಯೂ ಕೂಡ ಕೆಲವರಿಗೆ ಮಂಡಳಿಯ ಅಧಿಕಾರ ಸಿಗಬೇಕು, ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಇದು ಸಿಗದಿದ್ದರೆ ಸರ್ಕಾರ ಹೋಗುತ್ತದೆಂಬ ಚಿಂತೆ ನಿಮಗೆ ಇದೆ. ನೀವು ಮಂಡಳಿ ರಚನೆ ಮಾಡದಿದ್ದರೆ, ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡದಿದ್ದರೆ ನಾವು ಇನ್ನು ಎಲ್ಲಿಯವರೆಗೆ ಕಾಯುವುದಕ್ಕೆ ಸಾಧ್ಯವಿಲ್ಲ, ನಾವು ಸರ್ಕಾರವನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಕಾಗುತ್ತದೆಂದು ನೀವು ಸರ್ಕಾರಕ್ಕೆ ಈಗಾಗಲೇ ನೇರವಾಗಿ ಹೇಳಿದ್ದೀರಿ. ಮತ್ತೆ ಸಹಿ ಸಂಗ್ರಹಣೆ ಕೂಡ ನಡೆಯುತ್ತಿದೆ. ಇದಕ್ಕೆಲ್ಲಾ ಭಯಬಿದ್ದು ಈ ಒಂದು ಮಸೂದೆಯನ್ನು ಮಂಡಿಸಿದ್ದೀರಾ? ಈ ಮಸೂದೆ ಬಗ್ಗೆ ಮಾನ್ಯ ಪ್ರಕಾಶ್‌ರವರು ಪ್ರಾಮಾಣಿಕವಾಗಿ ಉತ್ತರವನ್ನು ನೇರವಾಗಿ ಕೊಡಬೇಕೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮಲ್ಲಿ ಎಲ್ಲಿಯೋ ಒಂದು ಕಡೆ ಪ್ರಾಮಾಣಿಕತೆ ಇದೆ. ಆದ್ದರಿಂದ ಪ್ರಾಮಾಣಿಕತೆಗೆ ಅಪಚಾರ ಆಗಬಾರದು. ಮತ್ತೆ ನನಗೆ ಅನಿಸುವುದೇನೆಂದರೆ ಒಂದು ಕಡೆ ಭಾರತೀಯ ಜನತಾ ಪಕ್ಷದ ಒತ್ತಡ ಅವರ ಮುಖಂಡರಿಗೆ ಇದೆ. ಮತ್ತೊಂದು ಕಡೆ ಜಾತ್ಯಾತೀತ ಪಕ್ಷದ ಮುಖಂಡರಿಗೆ ಒತ್ತಡ ಇದೆ. ನೀವು ಇದನ್ನು ಮಾಡಲಿಲ್ಲವೆಂದರೆ ಎಲ್ಲಿಯೋ ಒಂದು ಕಡೆ ಸರ್ಕಾರಕ್ಕೆ ಅಪಾಯ ಇದೆಯೇ ಎನ್ನತಕ್ಕಂಥದ್ದು ನನಗೆ ಭಾಸವಾಗಿದೆ.

ಶ್ರೀ ಎಂ.ಪಿ. ವೆಂಕಟೇಶ್: ಇದು ರಾಮ ರಾಜ್ಯ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಇದು ರಾವಣ ರಾಜ್ಯ. ರಾಮ ರಾಜ್ಯವಲ್ಲ. ಆದ್ದರಿಂದ ಇದನ್ನು ರಾಮ ರಾಜ್ಯವೆಂದು ಕರೆಯಬೇಡಿ. ಮಾನ್ಯ ಉಪಾಧ್ಯಕ್ಷರೆ, ನಾನು ತಮಗೆ ಹೇಳುವುದೇನೆಂದರೆ, ಇದು ರಾಮ ರಾಜ್ಯವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ವೆಂಕಟೇಶ್, ನೀವು ಈ ರೀತಿಯಾಗಿ ಹೇಳಿಕೊಳ್ಳಬಹುದು.

ಶ್ರೀ ಎಂ.ಪಿ. ವೆಂಕಟೇಶ್: ಬೆಳಗಾವಿಯಲ್ಲಿ ಈ ವಿಶೇಷ ಅಧಿವೇಶನ ನಡೆಸುತ್ತಿರುವುದೇ ನಿಜವಾಗಿಯೂ ಕೂಡ ರಾಮರಾಜ್ಯವಾಗಿ ಪರಿಣಮಿಸಿದೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವೆಂಕಟೇಶ್‌ಗೂ ಮತ್ತು ನನಗೂ ಬಹಳ ವರ್ಷದ ಬಾಂಧವ್ಯ. ಇದೇ ರೀತಿಯಾಗಿ ಗಲಾಟೆ ಮಾಡುತ್ತಾ ಹೋದರೆ ಕೊನೆಗೆ ಏನೂ ಸಿಗುವುದಿಲ್ಲ. ಮಂತ್ರಿ ಆಗುತ್ತಾರೆಂದು ಕಾದಿದ್ದರು, ಆದರೆ, ಆಗಲಿಲ್ಲ. ಈಗ ಯಾವುದಾದರೊಂದು ಮಂಡಳಿಯ ಅಧಿಕಾರ ಕೊಡಲಿ. ಮಾನ್ಯ ವೆಂಕಟೇಶ್‌ಗೆ ಮಂತ್ರಿ ಸ್ಥಾನವೇ ಕೊಡಬೇಕಾಗಿತ್ತು.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ: ಬೋರ್ಡ್, ಕಾರ್ಪೊರೇಷನ್‌ಗೆ ಏನೂ ತೊಂದರೆ ಇಲ್ಲವೆಂಬುದು ನನ್ನ ಭಾವನೆ. ಅಂದರೆ, ನಿಮ್ಮ ಹತ್ತಿರ ಈಗ ಏನು ಕಾಯಿದೆ ಇದೆ, ಇದರಲ್ಲಿ ಬೋರ್ಡ್ ಕಾರ್ಪೊರೇಷನ್‌ಗೆ ಅಧ್ಯಕ್ಷರು ಮಾಡುವುದಕ್ಕೆ ಅದು ಯಾವುದೇ ರೀತಿಯಲ್ಲಿ ಅಡ್ಡಿ ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. Existing Act ಹಿಂದೆ ಮಾಡುವಾಗ ಇದನ್ನು ಕವರ್ ಮಾಡಿಲ್ಲ. ನಾನು ಇನ್ನೂ ಸ್ಪಷ್ಟವಾಗಿ ಹೇಳುವುದೇನೆಂದರೆ, ಇಂಥ ಸಂಘ ಸಂಸ್ಥೆಗಳಿಗೆ ಮಾನ್ಯ ಕೋರೆಯಂಥವರು ಅಧ್ಯಕ್ಷರಾಗಿರುವಂಥ ಕಡೆ ಸ್ವಲ್ಪ ತಾಪತ್ರೆಯ ನಮ್ಮ ದೃಷ್ಟಿಯಲ್ಲಿದೆ. ಆದ್ದರಿಂದ ಇದನ್ನು ಮಾಡಲೇಬೇಕಾಗುತ್ತದೆ. ಏಕೆಂದರೆ, ದೊಡ್ಡ ದೊಡ್ಡ ಸಂಸ್ಥೆಗಳನ್ನು ನಡೆಸುವಂತಹವರು ಎಂ ಎಲ್ ಎ, ಎಂ ಎಲ್ ಸಿ ಆಗಿ ಬರಬಾರದೆಂದು ಹೇಳುವುದು ಸರಿಯಲ್ಲ. ಇದಕ್ಕೆ Educational Institutions ಸೇರಿಸಬೇಕೆಂದು ನಾನೇ ಸಜೆಸ್ಟ್ ಮಾಡಿದ್ದೇನೆ. Institutions registered under District Registrar ಕೆಳಗಡೆ ಬರುತ್ತದೆ. ಆದ್ದರಿಂದ ಬೋರ್ಡ್ ಕಾರ್ಪೊರೇಷನ್‌ಗೆ ಮಾಡುವುದಕ್ಕೆ ಏನು ತಾಪತ್ರೆಯ ಇರಲಿಲ್ಲ. ಆದ್ದರಿಂದ ನೀವು ನಾಮಿನೇಟ್ ಮಾಡಬಹುದಾಗಿತ್ತು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಈ ಒಂದು ಅಧಿವೇಶನದಲ್ಲಿ ಈ ಮಸೂದೆಯನ್ನು ತರಾತುರಿಯಲ್ಲಿ ತರತಕ್ಕಂಥ ಉದ್ದೇಶವಾದರೂ ಏನು? ತರತಕ್ಕಂಥ ಉದ್ದೇಶವೇಂದರೆ, ಒಂದು ಕಡೆ ಶಾಸಕರ ಒತ್ತಡ ಇರಬಹುದು. ಬೇರೆ ಮಾತು ಖಂಡಿತ ಏನಿಲ್ಲ.

(ಅಡಚಣೆ)

ಮಾನ್ಯ ಶ್ರೀನಿವಾಸ್‌ರವರೆ, ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬುದು ತಪ್ಪೇನೂ ಇಲ್ಲ. ತಾವು ಮಂತ್ರಿ ಆಗುತ್ತೀರೆಂದು ಬೆಳಿಗ್ಗೆ ಇತ್ತು. ಆದರೆ, ಸಂಜೆಯೊಳಗೆ ನೀವು ಪ್ರಮಾಣ ವಚನ ತೆಗೆದುಕೊಳ್ಳತಕ್ಕಂಥದ್ದು ಇಲ್ಲದಂತಾಯಿತು. ನಾನು ನಿಮ್ಮ ಪರವಾಗಿದ್ದೇನೆ. ನಿಮ್ಮ ಬಗ್ಗೆ ನನಗೆ ಕರುಣೆ ಇದೆ. ಇಲ್ಲಿ ಮಂತ್ರಿಗಳಾಗಬೇಕಾಗಿರತಕ್ಕಂಥವರು ಬಹಳ ಜನ ಆಗಿಲ್ಲ. ನಿಜವಾಗಿಯೂ ನನಗೆ ಬಹಳ ನೋವಿದೆ. ಇದು ನಿಜವಾಗಿಯೂ ಆಗಬೇಕು.

(ಅಡಚಣೆ)

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜುರವರು ಮಾತನಾಡುತ್ತಿದ್ದಾರೆ. ಆದ್ದರಿಂದ ತಾವು ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಮತ್ತು ನಮಗೂ ವ್ಯತ್ಯಾಸ ಇದೆ. ಯಾರೋಬ್ಬ IAS ಅಧಿಕಾರಿ ಕುಳಿತುಕೊಂಡು ಬೋರ್ಡ್ ನಡೆಸುವುದಕ್ಕಿಂತ ನಮ್ಮ ಸ್ನೇಹಿತರೊಬ್ಬರು ಅಧ್ಯಕ್ಷರಾಗತಕ್ಕಂಥದ್ದನ್ನು ನಾವು ಪ್ರಿವೆಂಟ್ ಮಾಡಬಾರದು. ಮತ್ತೆ ನಾವು ಟೀಕೆ ಕೂಡ ಮಾಡಬಾರದು. ದಯವಿಟ್ಟು ಕ್ಷಮಿಸಬೇಕು. ಅವರುಗಳನ್ನು ಮಾಡುವುದಕ್ಕೆ ನಾವು ಪ್ರಿವೆಂಟ್ ಮಾಡುವುದಕ್ಕೋಸ್ಕರ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಮಾತನಾಡುತ್ತೇವೆಂದು ಹೇಳತಕ್ಕಂಥ ಮಾತಿಗೆ ನಾನು ರಾಜಿಯಾಗುವುದಿಲ್ಲ.

ಅಲ್ಲಿ ಒಂದು ಕಡೆ ಛೇರ್ಮನ್ ಇನ್ನೊಂದು ಕಡೆ ಎಂ.ಡಿ. ಇನ್ನೊಂದು ಕಡೆ Board of Directors, 5,6,7,8 ನಿಮ್ಮ KIADB ಮುಳುಗಿರುವುದು ಅವರಂದ, ನಿಮ್ಮ KSFC ಮುಳುಗಿರುವುದು ಅವರಿಂದ. ಬರಲಿ ಒಳ್ಳೆಯವರು honest ಆಗಿರುವವರು ಶಾಸಕರನ್ನು ತಂದು ಅಲ್ಲಿ ಕೂಡಿಸುವುದಕ್ಕೆ ನಮ್ಮ ತಕರಾರು ಇಲ್ಲ. Technical ಆಗಿ Governor ರವರು ಹೇಳಿರುವ ಬಗ್ಗೆ ಗಮನ ಹರಿಸಬೇಕು.

ಶ್ರೀ ವಾಟಾಳ್ ನಾಗರಾಜ್: ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಅಲ್ಲಿರುವಂಥ ಮಾನ್ಯ ವೆಂಕಟೇಶ್ ಆಗಲಿ ಅಥವಾ ಯಾರಾದರೂ ಅಧ್ಯಕ್ಷರಾಗುವುದಕ್ಕೆ ನನ್ನದೇನೂ ತಕರಾರು ಇಲ್ಲ. ಆದರೆ ನೀವು ಅತುರಾತುರವಾಗಿ

ತಂದಿರುವುದಕ್ಕೆ ಏನು ಪರಿಸ್ಥಿತಿ ಎಂದು ಕೇಳುತ್ತಿದ್ದೇನೆ, ಅಷ್ಟೆ. ಆದ್ದರಿಂದ ಈ ಸದನವನ್ನು ಕರೆದಿರತಕ್ಕಂಥದ್ದು ಇದರ ಬಗ್ಗೆ ಅಲ್ಲ. ಸದನ ಕರೆದಿರತಕ್ಕಂಥದ್ದು ಡಾ:ನಂಜುಂಡಪ್ಪ ವರದಿಯ ಬಗ್ಗೆ, ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಬಿಟ್ಟು ನಾವು ಈ ಮಸೂದೆಯನ್ನು ತಂದಿರುವುದಕ್ಕೆ ನನ್ನ ನೇರವಾದ ವಿರೋಧವಿದೆ. ಈ ಮಸೂದೆ ತರುವುದಕ್ಕೆ ಉತ್ತರ ಕರ್ನಾಟಕಕ್ಕೆ ಇಲ್ಲಿಗೆ ಬರಬೇಕಾಗಿತ್ತೇ? ಬೆಂಗಳೂರಿನಲ್ಲಿ ಮಾಡಬಹುದಾಗಿತ್ತಲ್ಲಾ? ನಾವು ಬೆಳಗಾವಿಗೆ ಬರಬೇಕಾಗಿತ್ತಾ? ನಾನು ತಮ್ಮ ಉತ್ತರವನ್ನು ನೋಡಿ ಸಭಾತ್ಯಾಗ ಮಾಡುತ್ತೇನೆ, ತಾವು ಉತ್ತರವನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗಲೇ ಮಾಡಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಒಂದು ಮಸೂದೆಯನ್ನು ತಂದಿರತಕ್ಕಂಥದ್ದು ಬಹಳ ಹಿರಿಯರಾದಂಥ ಮಾನ್ಯ ವಾಟಾಳ್ ನಾಗರಾಜ್‌ರವರಂಥವರ ಅನುಭವ ಅವರ ತಿಳುವಳಿಕೆ ನಮ್ಮ ಸದನಕ್ಕೆ ಬೇಕು ಎನ್ನುವ ಕಾರಣಕ್ಕಾಗಿಯೇ ತಂದಿರುವಂಥದ್ದು. ಹಿಂದೆ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ ಗಡಿನಾಡ ವಿಚಾರಗಳಿಗೆ ಸಂಬಂಧಪಟ್ಟಂಥ ಪ್ರಾಧಿಕಾರವನ್ನು ಮಾಡಿ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಮುಂದೆ ಆ ಸರ್ಕಾರ ಚುನಾವಣೆಯ ಪ್ರಯುಕ್ತವಾಗಿ ಬಿದ್ದುಹೋದ ಮೇಲೆ ಅವರು ರಾಜೀನಾಮೆಯನ್ನು ಕೊಟ್ಟರು. ಅವರು ವಿಧಾನಪರಿಷತ್ತಿಗೆ ನಾಮಪತ್ರವನ್ನು ಸಲ್ಲಿಸಿದರು. ನಾಮಪತ್ರವನ್ನು ಸಲ್ಲಿಸಿದಾಗ ಅದು ಲಾಭದಾಯಕ ಹುದ್ದೆಯನ್ನು ಅವರು ಅನುಭವಿಸಿದ್ದರಿಂದ ಅವರು ಅನರ್ಹರಾಗುತ್ತಾರೆ. ಈಗಲೂ ಕೂಡ ಅವರು ರಾಜೀನಾಮೆಯನ್ನು ಕೊಟ್ಟಿಲ್ಲವೆಂದು ತಕರಾರನ್ನು ಹಾಕಿದಾಗ ಅವರು ಹೈಕೋರ್ಟಿನಲ್ಲಿ ಜಯಶೀಲರಾದರು. ಅವರ ನಾಮಪತ್ರ ತಿರಸ್ಕರಿಸಲ್ಪಟ್ಟಿತ್ತು. ಆದರೆ ಸುಪ್ರೀಂಕೋರ್ಟಿಗೆ ಹೋದಾಗ ಅದು ಲಾಭದಾಯಕ ಹುದ್ದೆ, ಆದ್ದರಿಂದ ಅವರ ಸದಸ್ಯತ್ವದಿಂದ ಆ ನಾಮನಿರ್ದೇಶನವನ್ನು ತಿರಸ್ಕರಿಸಬೇಕೆಂದು ನಿರ್ಣಯವಾಯಿತು. ಆದ್ದರಿಂದ ಅವರು ವಿಧಾನ ಪರಿಷತ್ತಿಗೆ ಬರುವುದಕ್ಕೆ ವಂಚಿತರಾದರು. ಅಂತಹ ಹಿರಿಯರು ವಿಧಾನ ಪರಿಷತ್ತಿಗೆ ಬಂದಿದ್ದರೆ ಸಭೆಗೆ ಕೂಡ ಶೋಭೆ ಸಿಗುತ್ತಿತ್ತು. ಆ ಕಾರಣಕ್ಕಾಗಿಯೇ ಈ ಒಂದು ಮಸೂದೆಯನ್ನು ನಾವು ತಂದಿದ್ದೇವೆ.

ಶ್ರೀ ಎನ್. ಚಲುವರಾಯಸ್ವಾಮಿ: ನಿಮಗಾಗಿ ತಂದಿರುವುದು ಎಂದು ನೀವು ತಿಳಿದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ಅದು ನಿಮಗಾಗಿ ತಂದಿರೋದು.

ಶ್ರೀ ಎಚ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರ ಉದ್ದೇಶವೇನೆಂದರೆ, ನನಗೆ ಆಗಿರುವಂಥದ್ದು ಬೇರೆಯವರಿಗೂ ಆಗಲಿ ಎನ್ನುವ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್: ಎಸ್.ಎಂ. ಕೃಷ್ಣರವರು ಇರಲಿಲ್ಲ. ನಾನು ವರದಿಕೊಡುವವರೆಗೂ ಅವರಿಗೆ ಸಮಾಧಾನ ಇರಲಿಲ್ಲ. ಮಧ್ಯಂತರ ವರದಿ ಸಾಕು ಇಂದು ಹೇಳಿ ತೆಗೆದುಕೊಂಡರು.

ಶ್ರೀ ಎಂ.ಪಿ. ಪ್ರಕಾಶ್: ಆಯಿತು ಅದು ಬಿಡಿ. ಮಾನ್ಯ ಮಾಧುಸ್ವಾಮಿಯವರು, ಈಗ ಬಹುತೇಕ ಇಂತಹ ವಿಚಾರದಲ್ಲಿ ಅಡ್ಡಿ ಬರಲಿಕ್ಕಿಲ್ಲ ಕಾನೂನು ಎಂದು ಹೇಳಿದರು. ಸಂವಿಧಾನದ Article 191ರಲ್ಲಿ Disqualification for membership ನಲ್ಲಿ ಅವರು ಮೊದಲನೇ ಮಾತು ಏನು ಹೇಳುತ್ತಾರೆ. 'A person shall be disqualified for being chosen as, and for being, a member of the Legislative Assembly or Legislative Council of the state –' for being chosen as, and for being,' ಈಗಲೂ ಕೂಡ ಇರತಕ್ಕಂಥವರಿಗೆ ಅನರ್ಹತೆಗೆ ಬರುತದೆ. 1956ರಲ್ಲಿ ಇಂತಹ ಕಾಯಿದೆಯನ್ನು ಮಾಡಿದಂಥ ಸಂದರ್ಭದಲ್ಲಿ ಯಾವುದು ಲಾಭದಾಯಕ ಹುದ್ದೆ ಎನ್ನತಕ್ಕಂಥದ್ದರ ವ್ಯಾಖ್ಯಾನ ಇರಲಿಲ್ಲ. ಯಾವ ಕಾನೂನಿನಲ್ಲಿಯೂ ಇರಲಿಲ್ಲ. ಈ ಕಾರಣಕ್ಕಾಗಿಯೇ ಯಾರೂ ಕೂಡ ಇದರ ಪ್ರಶ್ನೆಯನ್ನು ಮಾಡಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ನಿಮಿಷ. ಅದು ಆದ ಮೇಲೆ exemptions ಅನ್ನು ಮಾಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನಾನು ಹೇಳುತ್ತೇನೆ, ಅದನ್ನು ಮಾಡಿದ್ದೇವೆ, ಮಾಡಿದ್ದನ್ನೇ ಹೇಳುತ್ತೇನೆ. ತಾವು ಜ್ಞಾಪಕವನ್ನು ಮಾಡಿಕೊಳ್ಳಬೇಕು. 1989ರ ಸಾಲಿನಲ್ಲಿ ನಾವೆಲ್ಲಾ ಸೋತು ಹೋದಾಗ ನಮ್ಮ ಪಕ್ಷದಿಂದ ಕೇವಲ 24 ಜನ ಗೆದ್ದು ಬಂದಿದ್ದೆವು. 24 ಜನ ಗೆದ್ದು ಬಂದಂಥ ಸಂದರ್ಭದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಬ್ಬರು. ತಮ್ಮನ್ನು ಸೇರಿಸಿ 24 ಜನ ಇದ್ದರು ಅದರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಒಬ್ಬರು. ಅವರು ಮುಂದೆ ಯೋಜನಾ ಆಯೋಗದ ಉಪಾಧ್ಯಕ್ಷರಾದರು. ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಕೇವಲ ಅವರು ಒಂದು ರೂ.ಗಳ ಸಂಬಳದಲ್ಲಿ ಇರುತ್ತೇನೆಂದು ಹೇಳಿದಾಗಲೂ ಕೂಡ ಅಲ್ಲಿ ಕಾನೂನಿನ ರೀತಿಯಲ್ಲಿ ನಾವು 24 ಜನರು ಆಗ ಅವರು ಎಂ.ಎಲ್.ಎಗೆ ಅವರು

ರಾಜೀನಾಮೆ ಕೊಡುವುದಕ್ಕೆ ಪ್ರಯತ್ನ ಮಾಡಿದರು 24 ಜನಕ್ಕಿಂತ ಕಡಿಮೆಯಾದಾಗ ಸದನದ ಸಂಖ್ಯಾಬಲದ ಶೇಕಡಾ 10 ಕ್ಕಿಂತ ಕಡಿಮೆಯಾದರೆ ವಿರೋಧ ಪಕ್ಷದ ಸ್ಥಾನದಿಂದ ನಾವು ವಂಚಿತರಾಗುತ್ತೇವೆ. ಆದ್ದರಿಂದ ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಡಬಾರದೆಂದು ಹೇಳಿ ತಾವೂ ಕೂಡ ಅದರಲ್ಲಿ ಒಬ್ಬರಾಗಿ ಮಾನ್ಯ ಚಂದ್ರೇಗೌಡರನ್ನು ಹಾಗೂ ನಂತರದಲ್ಲಿ ಮಾನ್ಯ ದೇಶಪಾಂಡೆಯವರನ್ನು ನಮ್ಮ ವಿರೋಧ ಪಕ್ಷದ ನಾಯಕರನ್ನಾಗಿ ಮಾಡಿಕೊಂಡೆವು. ಆಗ ಯಾರೂ ಕೂಡ ಈ ವಿಚಾರವನ್ನು ಪ್ರಶ್ನೆ ಮಾಡಲಿಲ್ಲ. ಈ ಪ್ರಶ್ನೆ ಮಾಡಲಿಕ್ಕೆ ಪ್ರಾರಂಭವಾಗಿದ್ದು ಸೇಡಿನ ರಾಜಕಾರಣಕ್ಕಾಗಿ ಸೇಡಿನ ರಾಜಕಾರಣವನ್ನು ಕಾಂಗ್ರೆಸ್‌ನವರು ಪ್ರಾರಂಭ ಮಾಡಿ ಈ ದೇಶದಲ್ಲಿ ದೊಡ್ಡ ಅನಾಹುತಕ್ಕೆ ಕಾರಣರಾದರು. ಪರಿಣಾಮಗಳು ಏನಾಗುತ್ತವೆ, ತಾವು ಬಿಟ್ಟ ಬಾಣ ತಮಗೇ ತಿರುಗುಬಾಣವಾಗಿ ಬರುತ್ತದೆ ಎನ್ನುವುದೂ ಕೂಡ ಗೊತ್ತಾಗಿದೆ. ಜಯಾಬಚನ್‌ರವರ ಮತ್ತು ಅಮಿತಾಬ್‌ಬಚ್ಚನ್‌ರವರ ಕುಟುಂಬದ ಮೇಲೆ ಇರತಕ್ಕಂಥ ದ್ವೇಷಕ್ಕಾಗಿ ಜಯಾಬಚ್ಚನ್‌ರವರು ಉತ್ತರ ಪ್ರದೇಶದ ಚಲನಚಿತ್ರ ಮಂಡಳಿಯ ಅಧ್ಯಕ್ಷರಾಗಿದ್ದಾರೆ, ಅದು ಲಾಭದಾಯಕವಾದಂಥ ಹುದ್ದೆ. ಆದ್ದರಿಂದ ಅವರನ್ನು ಅನರ್ಹಗೊಳಿಸಬೇಕು ಎನ್ನುವಂಥ ಒಂದು ಮನವಿಯನ್ನು ಚುನಾವಣೆಯ ಆಯುಕ್ತರಿಗೆ ಕೊಟ್ಟರು. ಚುನಾವಣಾ ಆಯುಕ್ತರು ಸಂವಿಧಾನವನ್ನು ನೋಡಿ ಇದು ಲಾಭದಾಯಕ ಹುದ್ದೆಯಾಗಿರುವುದರಿಂದ, ಇವರನ್ನು ಅನರ್ಹ ಗೊಳಿಸಬೇಕೆಂದು ಮಾನ್ಯ ರಾಷ್ಟ್ರಪತಿಗಳಿಗೆ ಕಳುಹಿಸಿಕೊಟ್ಟರು. ಕಳುಹಿಸಿಕೊಟ್ಟಂಥ ಸಂದರ್ಭದ ನಡುವೆ ಅನೇಕರಿಗೆ ಈ ಪ್ರಶ್ನೆಯನ್ನು ಮಾಡುತ್ತಾ ಸ್ವತಃ ಲೋಕಸಭೆಯ ಸ್ಪೀಕರ್ ಆಗಿರುವಂಥ ಮಾನ್ಯ ಮುಖರ್ಜಿಯವರು ಅವರು ಶಾಂತಿನಿಕೇತನದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ಶ್ರೀಮತಿ ಸೋನಿಯಾಗಾಂಧಿಯವರು ಇಂದಿರಾ ಗಾಂಧಿ ಫೌಂಡೇಷನ್ನ್ ಅಧ್ಯಕ್ಷರಾಗಿದ್ದಾರೆ. ಅವರೆಲ್ಲರನ್ನೂ ಕೂಡ ಅನರ್ಹಗೊಳಿಸಬೇಕೆಂದು ಯಾದಿಯನ್ನು ತಯಾರು ಮಾಡಿದಾಗ ಸುಮಾರು 45 ಮಂದಿ ಕಾಂಗ್ರೆಸ್‌ನವರು ಅಂತಹ ಅನರ್ಹತೆಗೆ ವಿವಿಧ ರಾಜ್ಯಗಳಲ್ಲಿ ಮತ್ತು ಲೋಕಸಭೆಗೆ ಅವರು ಬರುತ್ತಿದ್ದರು. ಹಾಗೆಯೇ ಕಮ್ಯುನಿಸ್ಟ್ ಪಕ್ಷದವರು ಸುಮಾರು 15 ಜನರು ಇದ್ದರು. ಬಿಜೆಪಿ ಪಕ್ಷದಿಂದ ಸುಮಾರು 30 ಜನರು ಇದ್ದರು. ಈ ಅನರ್ಹತೆಯನ್ನು ತೆಗೆಯಬೇಕೆಂದು ಹೇಳಿ ಒಂದು ಕಾಯಿದೆಯನ್ನು ಮಂಡಿಸಿದರು. ಈ ಕಾಯಿದೆಯನ್ನು ಮಂಡಿಸಿ ಉಭಯ ಸದನಗಳಲ್ಲಿ ಪಾಸ್ ಆದ ನಂತರ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿದಾಗ ರಾಷ್ಟ್ರಪತಿಗಳು ಅದನ್ನು ಒಪ್ಪದೆ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ ಅದನ್ನು ಮತ್ತೆ ಸಂಸತ್ತಿಗೆ ಕಳುಹಿಸಿಕೊಟ್ಟರು.

ಸಂಸತ್ತಿನವರು ಈ ವಿಚಾರವನ್ನು ಪಾಸ್ ಮಾಡಿ ಹಿಂದಿನ ಪೂರ್ವಾನ್ವಯ ವಾಗುವಂಥ ರೀತಿಯಲ್ಲಿಯೂ ಕೂಡ ಇದು ಅನ್ವಯವಾಗಬೇಕು ಎನ್ನುವಂಥದ್ದನ್ನು ಅವರು ಪಾಸ್ ಮಾಡಿದಂಥದ್ದು ಆಗಿದೆ. ರಾಷ್ಟ್ರಪತಿಗಳಿಗೆ ಅವಮಾನ ಮಾಡಬೇಕೆನ್ನುವ ಉದ್ದೇಶ ಅಲ್ಲಿಯ ಲೋಕಸಭೆಯ ಸದಸ್ಯರಿಗೂ ಇರಲಿಲ್ಲ. ಮತ್ತು ನಮಗೂ ಕೂಡ ಇರಲಿಲ್ಲ. Clause 1(a) of the Article 102 provides that' 'A person shall be disqualified for being chosen as, and for being, a member of either House of Parliament, if he holds any office of profit under the Government of India or the Government of any State, other than an office declared by Parliament by law not to disqualify its holder; 'ಅಂದರೆ ಇಲ್ಲಿ ನಮ್ಮ 1956 ರ ಕಾನೂನು'. The term he holds an office of profit though not defined has been the subject matter of interpretations. In several decisions of the Court, an office of profit is an office which is capable of yielding profit or a pecuniary gain. Holding an office under the Central or the State Government to which some pay, salary, emolument, remuneration, or non compensatory allowances is attached, is holding an office of the profit. The question whether a person who holds an office of profit is required to be interpreted in a realistic manner, nature of payment must be considered as a matter of substance rather than of form. Gnomonical chair is not important. In fact, mere use of the word 'honorarium' cannot take the payment out of the purview of profit if there is a pecuniary gain for recipient. Payment of honorarium in addition to daily allowances in the nature of compensatory allowances, rent-free accommodation and a chauffer driven car at a state expenses are clearly in the nature of remuneration and sources of pecuniary gain and hence constitute profit. For deciding the question as to whether one is holding an office of profit or not, what is relevant is, whether the office is capable of yielding a profit or pecuniary gain and not whether a person actually obtained a monitory gain. If the pecuniary gain is receivable in connection with the office, then it becomes an office of profit irrespective of it whether such pecuniary gain is actually

received or not.' ಶ್ರೀಮತಿ ಜಯಾ ಬಚ್ಚನ್ ಅವರು ಒಂದು ರೂಪಾಯಿಯನ್ನೂ ಕೂಡ ತೆಗೆದುಕೊಂಡಿರಲಿಲ್ಲ, ಕಾರನ್ನೂ ಉಪಯೋಗಿಸಿರಲಿಲ್ಲ, ಮನೆಯನ್ನೂ ಉಪಯೋಗಿಸರಲಿಲ್ಲ. ಆದರೆ Supreme Court ನವರ judgment ಬಂತು. 'If the office becomes receivable, it automatically becomes an office of profit. This is the new interpretation which was given by the Supreme Court which necessitated the State Government as well as the Central Government to bring this amendment. ಆದರೆ ನೀವು ಯೋಚನೆ ಮಾಡಬಹುದು. ಹಿಂದೆ ಸೋನಿಯಾಗಾಂಧಿಯವರು ಜವಾಹರಲಾಲ್ ನೆಹರು Art Gallery ಮತ್ತು ಇಂದಿರಾಗಾಂಧಿ Heart Foundation ಇದಕ್ಕೆಲ್ಲಾ ಅಧ್ಯಕ್ಷರಾಗಿದ್ದಾಗ ಅದರ ಸವಲತ್ತುಗಳನ್ನೆಲ್ಲಾ ಉಪಯೋಗಿಸಿದ್ದರು. ಅವರು ಅದನ್ನು ಉಪಯೋಗಿಸಿದ್ದರೆ ಯಾರು ಕಟ್ಟಬೇಕೆನ್ನುವ ಪ್ರಶ್ನೆ ಬಂತು. ಅವರು ಲೋಕಸಭೆ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರು. ಮತ್ತೆ ಪುನರ್ ಆಯ್ಕೆಯಾದರು. ಪುನರ್ ಆಯ್ಕೆ ಆದರೂ ಕೂಡ ಅದು ಪೂರ್ವಾನ್ವಯವಾಗುತ್ತದೆ. ನೀವು ಆ ದುಡ್ಡನ್ನು ವಾಪಸ್ಸು ಕಟ್ಟಬೇಕು. ಈ judgment ನ ಕಾರಣಕ್ಕಾಗಿ ಅಂಥ ಪ್ರಶ್ನೆಗಳು ಮತ್ತೆ ಉದ್ಭವವಾದವು. ಆ ಕಾರಣಕ್ಕಾಗಿಯೇ ತಾವು ಹೇಳಿದಂತೆ ಇದು ಅನಿವಾರ್ಯವಾದಂಥ ಪರಿಸ್ಥಿತಿಯಾಗಿ ಹೊಸ ವ್ಯಾಖ್ಯಾನ ಬಂದಿರುವುದರಿಂದ ಈ ಒಂದು ತಿದ್ದುಪಡಿಯ ಈ ಒಂದು ಮಸೂದೆಯನ್ನು ತಂದಿದ್ದೇವೆ. ಅಲ್ಲಿ ರಾಷ್ಟ್ರಪತಿಗಳು ಅಂಕಿತವನ್ನು ಕೊಟ್ಟಿದ್ದಾರೆ. ಆ ಒಂದು ರಾಷ್ಟ್ರಪತಿಯ ಸ್ಥಾನಕ್ಕೆ ಅಗೌರವ ಸೂಚಿಸುವುದಲ್ಲ. ವಾಸ್ತವಿಕ ಸಂಗತಿಗಳನ್ನು ಗುರುತು ಹಿಡಿಯುವುದು. ಇದರಲ್ಲಿ ಬಹಳ ಮುಖ್ಯವಾದುದು. ತಾವೂ ಕೂಡ ಅಭಿವ್ಯಕ್ತ ಮಾಡಿದ್ದೀರಿ. ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಅನುಭವಸ್ಥರಾಗಿರುವವರು ಜನಪ್ರತಿನಿಧಿಗಳು ಆಗಿರುವವರು, ಅವರು ಇಂತಹ ಒಂದು ಹುದ್ದೆಗಳಲ್ಲಿ ಇದ್ದರೆ ಅದನ್ನು ಚೆನ್ನಾಗಿ ನಡೆಸಿಕೊಂಡು ಹೋಗಬಹುದು ಎನ್ನುವ ಹಿನ್ನೆಲೆಯಲ್ಲಿ ಅದು ಒಂದು ಕಾರಣ ಮತ್ತು ಅವರನ್ನು ಅನರ್ಹಗೊಳಿಸುವುದರ ಮೂಲಕವಾಗಿ ದುಬಾರಿಯಾದಂಥ ಚುನಾವಣೆಗಳನ್ನು ಮಾಡಬೇಕಾಗಿರುತ್ತದೆ, ಅದರಿಂದಾಗಿ ಹೆಚ್ಚು ಖರ್ಚು ಬರುತ್ತದೆ ಎನ್ನುವ ಕಾರಣಕ್ಕಾಗಿ ಈ ಒಂದು ಕಾನೂನನ್ನು ಮಾಡಬೇಕೆಂದು ಹೇಳಿ ಲೋಕಸಭೆಯ ಒಂದು ಮಸೂದೆಯಲ್ಲಿಯೂ ಕೂಡ ಆ ವಿಚಾರವನ್ನು ಪೀಠಿಕಾ ಪ್ರಸಂಗದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದೆ ರೀತಿಯಾಗಿ ನಾವು ಕೂಡ ಪೀಠಿಕಾ

ಪ್ರಸಂಗದಲ್ಲಿ ಪ್ರಸ್ತಾಪ ಮಾಡಿದ್ದೇವೆ. ದಯವಿಟ್ಟು ತಾವು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ A.P.M.C. Act ಮಾಡಿದಾಗ ಸ್ಯಾಲರಿ ಎಂದು A.P.M.C. ಅಧ್ಯಕ್ಷರಿಗೆ ಫಿಕ್ಸ್ ಮಾಡಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ, Z.P. ಅಧ್ಯಕ್ಷರಿಗೆ, T.P.S. ಅಧ್ಯಕ್ಷರಿಗೆ ಸ್ಯಾಲರಿಯನ್ನು ಫಿಕ್ಸ್ ಮಾಡಿದ್ದರು. ಆದರೆ ಬೇರೆ ಕಡೆ honorarium ಎಂದು ಹೇಳಿದರು. ಏಕೆಂದರೆ, interpretation of law was that, who have got gross salary, who have got gross TA, ಅವನಿಗೆ ಅಲ್ಲಿ ಇದನ್ನು ಚಾರ್ಜ್ ಮಾಡಬಹುದಾಗಿತ್ತು. Office of Profit ಕೆಳಗಡೆ ಮಾನ್ಯ ಹೆಗಡೆಯವರಿಗೆ ಆವತ್ತು ಏನೂ ಒಂದು decision ಆಗಿರಲಿಲ್ಲ. ಹೆಗಡೆಯವರಿಗೆ ಏನು ಅವತ್ತು adverse ಆಗಿ decision ಆಗಿರಲಿಲ್ಲ. Because he was drawing only one rupee, he continued for five years as MLA.

Sri M.P. Prakash: No body challenged it. Nobody went to Election Commission.

Sri J.C. Madhuswamy: No. It was challenged. It was raised. ಆಗ ನಾವೆಲ್ಲರೂ ಜೊತೆಯಲ್ಲಿದ್ದೆವು. It was raised. Mr. Hegde is holding two offices. Deputy Chairman of the Planning Commission is an office of profit ಹುದ್ದೆ ಎಂದು ಬಂತು. ಲಕ್ಕಿಲಿ ಅವರು I will not draw any honorarium or salary ಎಂದು ಬರೆದುಕೊಟ್ಟಿದ್ದರು. A.P.M.C. ಅಧ್ಯಕ್ಷರ ಹುದ್ದೆ challenge ಆಯಿತು. A.P.M.C. ಅಧ್ಯಕ್ಷರಾದವರು ತಾಲ್ಲೂಕು ಮಟ್ಟದಲ್ಲಿ ಸ್ಯಾಲರಿಯನ್ನು ತೆಗೆದುಕೊಂಡಿದ್ದರಿಂದ it amounts to disqualification ಅಂತಲೇ ಅವತ್ತು ಈ ರಾಜ್ಯದ ಕಾನೂನು ಇತ್ತು. ಅವತ್ತೂ ಕೂಡ ಇದನ್ನು challenge ಮಾಡಿದ್ದಾರೆ. ನನಗೂ ಕೂಡ challenge ಆಯಿತು. K.M.F. Tumkur ಡೈರಿಯ ಅಧ್ಯಕ್ಷನಾಗಿ ಶಾಸಕರಾಗಿ ಇರಬಹುದಾ ಎಂದು. Because I was drawing honorarium, nothing had happened. ಅದಕ್ಕೆ ನಾನು ನಿಮಗೆ ಹೇಳುತ್ತಿರುವುದು ಇದನ್ನು ಸ್ವಲ್ಪ ನೋಡಿ. ಎರಡನೆಯದು. Yes, you are right. Retrospective effect ಯಾರನ್ನೋ save ಮಾಡುವುದು ಅನಿವಾರ್ಯವಾಯಿತು. ನೀವು ಏತಕ್ಕಾಗಿ ಇದನ್ನು ತರಬೇಕು? ಯಾರಿದ್ದಾರೆ?

ಶ್ರೀ ಎಂ.ಪಿ. ಪ್ರಕಾಶ್: ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗಾದರೆ ಯಾರನ್ನಾದರೂ ಉಳಿಸುವುದಕ್ಕೋಸ್ಕರ ಕಾನೂನು ಮಾಡಿದರೆ, ಹಾಗಾದರೆ ನೀವು ಇಷ್ಟು ಹೊತ್ತು ಮಾತನಾಡುವುದು ಸರಿಯಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಯಾರನ್ನೇ ಉಳಿಸಬೇಕೆಂದಲ್ಲ. ನಮ್ಮ ಈ ಸರ್ಕಾರಕ್ಕೆ ಎಲ್ಲರಿಗೂ ಕೂಡ ಸಮಾನಾಂತರವಾದ ಅವಕಾಶಗಳು ಆಗಬೇಕೆಂದು ಮಾಡಿದ್ದೇವೆ. ಅದು ಏನಾದರೂ ಇರಲಿ, ಒಂದು ತಾತ್ವಿಕವಾದಂಥ ಅಭಿಪ್ರಾಯಕ್ಕೆ ಬಂದ ಮೇಲೆ ಅಲ್ಲಿ ವ್ಯಕ್ತಿ ಮುಖ್ಯವಾಗುವುದಿಲ್ಲ. ವ್ಯಕ್ತಿ ಗೌಣವಾಗುತ್ತಾನೆ. ಅದರ ತಾತ್ವಿಕ ವಿಚಾರಗಳು ಮುಖ್ಯ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ನೀವು ಯಾರನ್ನು ತಲೆಯಲ್ಲಿಟ್ಟುಕೊಂಡು ಹೇಳುತ್ತಿದ್ದೀರಿ, ಅವರು ಅಟ್ರಾಕ್ಟ್ ಆಗುವುದಿಲ್ಲ. ನಾವು ಚಾಲೆಂಜ್ ಮಾಡಿ ಹೇಳುತ್ತೇವೆ. Holding an office in Co-operative organization was never termed as an office of profit. ಹಾಗಾದರೆ ಈ ರಾಜ್ಯದಲ್ಲಿ ಯಾರೂ ಕೂಡ ರಾಜಕೀಯವನ್ನು ಮಾಡಲಿಕ್ಕಾಗುತ್ತಿರಲಿಲ್ಲ. ನಾನು ನಿಮಗೆ ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ನೀವು ಕನ್ಸೀಡ್ ಆಗಬೇಕು. Governorಗಾದರೂ ಆಗಬೇಕು, ಈ ಹೌಸ್‌ಗಾದರೂ ಆಗಬೇಕು. What prevents you in amending from the prospective effect ಎಂದು ಹೇಳುವುದಕ್ಕೆ ಏನು ತಪ್ಪಾಗುತ್ತದೆ? ಇಲ್ಲಿಂದ ಮುಂದಕ್ಕೆ ಈ ಶಾಸನ ಮಾಡುತ್ತೇವೆಂದು ಬಿಟ್ಟು 1956ನೇ ಇಸವಿಯಿಂದ ಈ ಶಾಸನಕ್ಕೆ ನಾನು ಹಕ್ಕು ಕೊಡುತ್ತೇನೆ, ಜಾರಿಗೊಳಿಸುತ್ತೇನೆಂದು ಹೇಳಿದರೆ, ಜನರು ನಮ್ಮನ್ನು ಏನೆನ್ನುತ್ತಾರೆ? ಕೋರ್ಟ್ ಏನನ್ನುತ್ತದೆ; ಬೆಳಗಾವಿಗೆ ಬಂದು ಸುವರ್ಣ ಕರ್ನಾಟಕದ ಸಲುವಾಗಿ ಇದನ್ನು ಗಿಫ್ಟ್ ಎಂದು ಕೊಡುತ್ತಿರುವಿರಾ? Is this a gift? ಮುಂದೆ ಆಗುವವರಿಗೆ ತೊಂದರೆಯಾಗಬಾರದು ಎಂದು ಮಾಡಿ. ನಾವು ಬೇಡವೆನ್ನುವುದಿಲ್ಲ. 1956ನೇ ಇಸವಿಯಿಂದ ಯಾರ್‍ಯಾರು ಏನನ್ನು ಮಾಡಿಕೊಂಡು ಬಂದಿದ್ದಾರೋ, ಅವರಿಗೆಲ್ಲಾ ಸಾರಾಸಗಟಾಗಿ exemption ಕೊಡುತ್ತೀರಾ? ಸ್ಟೂಡೆಂಟ್ ಯೂನಿಯನ್‌ನಲ್ಲಿ ಸ್ಟ್ರೈಕ್ ಮಾಡಿರುವವರ ಕೇಸ್‌ಗಳನ್ನು ತೆಗೆಯಿರಿ. ರೈತರ ಪರವಾಗಿ ಸ್ಟ್ರೈಕ್ ಮಾಡಿರುವವರ ಮೇಲಿರುವ ಕೇಸ್‌ಗಳನ್ನು ತೆಗೆಯಿರಿ. ಗಡಿ ಪರವಾಗಿ ಸ್ಟ್ರೈಕ್ ಮಾಡಿರುವವರ ಮೇಲಿರುವ ಕೇಸುಗಳನ್ನು ತೆಗೆಯಿರಿ ಎಂದರೆ ಇವತ್ತಿನವರೆಗೂ ಈ ಸರ್ಕಾರ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು ಅವರ

ಕೇಸನ್ನು ವಿತ್ ಡ್ರಾ ಮಾಡುವಷ್ಟು ದೊಡ್ಡತನ ತೋರಿಸಲಿಲ್ಲ. ಯಾರೋ ಅಧಿಕಾರವನ್ನು ಅನುಭವಿಸಿಕೊಂಡು 1956ನೇ ಇಸವಿಯಿಂದ ಬಂದಿರುವವರನ್ನು ನೀವು ಎಕ್ಸೆಂಪ್ಟ್ ಮಾಡಿಬಿಟ್ಟು ರಕ್ಷಣೆ ಕೊಡುವುದಕ್ಕೋಸ್ಕರ ಈ ಶಾಸನ ಮಾಡಿ ನಮ್ಮನ್ನೆಲ್ಲಾ ಪಾರ್ಟಿ ಮಾಡುತ್ತೀರಾ? ನೀವು ಅದನ್ನೇ ಮಾಡಬೇಕೆಂದರೆ ಅದಕ್ಕೆ ನಮ್ಮ ವಿರೋಧವಿದೆ, ನಾವು ಹೊರಗೆ ಹೋಗಬೇಕಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸದನದಿಂದ ಹೊರನಡೆದರು)

ಶ್ರೀ ವಾಟಾಳ್ ನಾಗರಾಜ್: ಯಾವ ಉದ್ದೇಶಕ್ಕೆ ಈ ಸದನವನ್ನು ಕರೆದಿರಿ? ಆ ಉದ್ದೇಶ ಈಡೇರುತ್ತಿಲ್ಲ ಇದನ್ನೇ ನಾವು ಮೊದಲಿನಿಂದ ಹೇಳುತ್ತಿರುವುದು, ನಂಜುಂಡಪ್ಪ ವರದಿಯ ಮೇಲೆ ಚರ್ಚೆಯಾಗಬೇಕೆಂದು ಇವರೆಲ್ಲಾ ಕೇಳಿದರು. ನಾವು ಗಂಭೀರವಾಗಿ ಕುಳಿತಿದ್ದೆವು. ಬರಗಾಲದ ಬಗ್ಗೆ ಚರ್ಚೆ ಆಗುವಾಗಲೂ ಕೂಡ ನಾವು ಗಂಭೀರವಾಗಿ ಕುಳಿತಿದ್ದೆವು. ಜೊತೆಗೆ ಈ ಸದನ ಕರೆದ ಉದ್ದೇಶವೇನು? ಸದನದಲ್ಲಿ ಸರ್ಕಾರ ಏನು ಮಾಡಬೇಕೆಂದು ಹೇಳಬೇಕಾಗಿದೆ? ಇದು ಸ್ವಾರ್ಥ, ಇದು ಸ್ವಾರ್ಥಸದನವಾಗುತ್ತದೆ. ಇದರಿಂದ ಯಾವುದೇ ಉದ್ದೇಶ ಈಡೇರಲಿಲ್ಲ. ಉತ್ತರ ಕರ್ನಾಟಕ, ಬೆಳಗಾವಿಗೆ ಅಪಚಾರ ಮಾಡಿದಂತಾಗುತ್ತದೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

2006ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ). ವಿಧೇಯಕ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ಖಂಡ 2 ಕ್ಕೆ ತಂದಿರುವಂತಹ ತಿದ್ದುಪಡಿಯ ಅಳವಡಿಸಿಕೊಂಡು ಈ ಉಭಯ ಸದನಗಳಿಂದ ಅಂಗೀಕಾರವಾದಂತಹ, ರಾಜ್ಯಪಾಲರಿಂದ ಪುನರ್‌ಪರಿಶೀಲಿಸಿ ಹಿಂತಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಖಂಡ 2ಕ್ಕೆ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

"(2)ನೇ ಖಂಡದ (5)ನೇ ಉಪಖಂಡದಲ್ಲಿ (ಡಿ) ಬಾಬ್ತುವಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಡಿ) ಯಾವುದೇ ಸಮಿತಿಯ (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ಅಥವಾ ಸಂಘಗಳ ನೋಂದಣಿಗೆ ಸಂಬಂಧಪಟ್ಟ ಯಾವುದೇ ಇತರ ಕಾನೂನಿನಡಿಯಲ್ಲಿ ನೋಂದಾಯಿತವಾದ ಯಾವುದೇ ಸಂಘದ ಆಡಳಿತ ಮಂಡಳಿಯ ಚೇರ್ಮನ್, ವೈಸ್ ಚೇರ್ಮನ್, ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕ ಅಥವಾ ಸದಸ್ಯ ಮೇಲ್ಕಂಡ ಹುದ್ದೆಗಳನ್ನು ಯಾವುದೇ ಹೆಸರಿನಲ್ಲಾದರೂ ಕರೆದಿರಲಿ, ಅವುಗಳು ಎಂದು ಪ್ರತಿಯೋಜಿಸತಕ್ಕದ್ದು".

ಪ್ರಸ್ತಾವ ಮಂಡಿಸಲ್ಪಟ್ಟಿತು.

ಉಪಾಧ್ಯಕ್ಷರು: ಈಗ ಖಂಡ 2 ಕ್ಕೆ ತಿದ್ದುಪಡಿಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ:-

"(2)ನೇ ಖಂಡದ (3)ನೇ ಉಪಖಂಡದಲ್ಲಿ (ಡಿ) ಬಾಬ್ತುವಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(ಡಿ) ಯಾವುದೇ ಸಮಿತಿಯ (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ಅಥವಾ ಸಂಘಗಳ ನೋಂದಣಿಗೆ ಸಂಬಂಧಪಟ್ಟ ಯಾವುದೇ ಇತರ ಕಾನೂನಿನಡಿಯಲ್ಲಿ ನೋಂದಾಯಿತವಾದ ಯಾವುದೇ ಸಂಘದ ಆಡಳಿತ ಮಂಡಳಿಯ ಚೇರ್ಮನ್, ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕ ಅಥವಾ ಸದಸ್ಯ ಮೇಲ್ಕಂಡ ಹುದ್ದೆಗಳನ್ನು ಯಾವುದೇ ಹೆಸರಿನಲ್ಲಾದರೂ ಕರೆದಿರಲಿ, ಅವುಗಳು ಎಂದು ಪ್ರತಿಯೋಜಿಸತಕ್ಕದ್ದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ.'

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 3

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೇ:- "ಖಂಡ 3 ವಿಧೇಯಕದ ಅಂಗವಾಗಿರುತ್ತದೆ" (ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 3 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ:- "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮೊದಲನೇಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ,

"ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಶೀಲಿಸಿ ಹಿಂತಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನಮಂಡಲದ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವ ರೀತಿಯಲ್ಲಿ ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ.'

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, 'ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಶೀಲಿಸಿ ಹಿಂತಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನಮಂಡಲದ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವ ರೀತಿಯಲ್ಲಿ ಪುನರ್ ಅಂಗೀಕರಿಸುವುದು."

ಪುನರ್ ಅಂಗೀಕರಿಸಿರುವ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಪುನರ್ ಅನುಮೋದನೆ ನೀಡಲಾಯಿತು. (ಅನುಬಂಧ-2)